Sri MAHMOOD SHARIFF.—On several occasions representations have been made that so far as some major languages are concerned, some persons knowing Shorthand in those languages may be appointed and I think you gave a promise also to consider the matter.

Mr. SPEAKER.—I considered the matter. It is not so simple as it appears. No Marathi knowing Reporter is willing to come here. Another thing is that it is very difficult to find a Hindi-*cum*-Marathi Reporter.

Sri MAHMOOD SHARIFF.—In any case, so for as Urdu is concerned, there are some people.

Mr. SPEAKER.—We cannot make any arrangements for Urdu because after all, there may be one or two persons who want to speak in Urdu. But nobody has spoken in Urdu till now.

Sri. MAHMOOD SHARIFF.—There are many people coming from Hyderabad who wish to speak in Urdu.

Mr. SPEAKER.—I think the Member speaks for the House. Naturally if he speaks in a language which is better understood by other Members.

Sri MAHMOOD SHARIFF.—May I submit there are several members who would like to speak in Urdu?

Mr. SPEAKER.—I know there are some members who want to speak in Urdu. It is for the pleasure of speaking in Urdu but nobody understands it.

Sri RAMAKRISHNA HEGDE.—Is there any arrangement made for recording Hindi speeches?

Mr. SPEAKER.—I tried to make arrangements for recording Marathi and Hindi speeches. I tried to get a Reporter from Bombay but it was not possible.

BUDGET ESTIMATES FOR 1961-62

Demands for Grants—Debate—(*contd.*)

†ಶ್ರೀ ಡಿ. ದೇವರಾಜ್‌ಅರಸ್ (ಹುಣಸೂರ್).—ಸ್ವಾಮಿ ಅರಣ್ಯ ಶಾಖೆ 1957-58ನೇ ಇಸವಿಯಿಂದ ಈಚೇಗೆ ಲಾಭದಾಯಕವಾಗಿ ಇದುವರೆವಿಗೂ ಕೆಲಸ ಮಾಡಿಕೊಂಡು ಬಂದಿದೆ. ನಾಲ್ಕು ಕೋಟಿ 97 ಲಕ್ಷ ಚಿಲ್ಲರೆ ರೂಪಾಯಿಗಳು 1958ನೇ ಇಸವಿಯಲ್ಲಿ ಇದ್ದ ಆದಾಯ ಈಗ 1960-61ನೇ ಇಸವಿಯಲ್ಲಿ 6ಕೋಟಿ 50ಲಕ್ಷ, 1961-62ಕ್ಕೆ ಎಸ್ಟಿಮೇಟ್ 6ಕೋಟಿ 92ಲಕ್ಷ ಇವೆ. ಇದರಲ್ಲಿ ಎರಡು ಮುಖ್ಯ ಬಾಬಿನಿಂದ ಅರಣ್ಯದ ಆದಾಯ ಬರುತ್ತದೆ. ಅವು ಯಾವುವೆಂದರೆ ನಾಟಾ ಮರಗಳು, ಸ್ಯಾಂಡಲ್ ವುಡ್, ಮತ್ತು ಬೊಂಬು ವಗೈರೆಗಳಿಂದ ಮರಗಳನ್ನು ಅರಣ್ಯದವರು ಎಕ್ಸ್‌ಪ್ಲಾಯಿಟ್ ಮಾಡಬೇಕಾದರೆ ಎರಡು ವಿಧದಲ್ಲಿ ಮಾಡುತ್ತಾ ಇದ್ದಾರೆ. ಒಂದು ಸರ್ಕಾರದವರೇ ನೇರವಾಗಿ ಸಿಬ್ಬಂದಿ ಇಟ್ಟು ಮರಗಳನ್ನು ಕಡಿಸಿ ಅದನ್ನು ವ್ಯಾಪಾರಕ್ಕೆ ಕೊಡತಕ್ಕದ್ದು. ಎರಡನೆಯದು ಖಾಸಗೀ ಜನರಿಗೆ ಕೂಪ್ಸ್ ಮಾಡಿ ಕೊಟ್ಟು ಅದರಿಂದ ಮರಗಳನ್ನು ಕಡಿಸಿ ಅದನ್ನು ಮಾರಾಟಕ್ಕೆ ಕೊಡುವಂಥಾದ್ದು. ಖಾಸಗೀ ಬಾಬಿನಿಂದ ಮಾರಾಟ

(ಶ್ರೀ ಡಿ. ದೇವರಾಜ ಅರಸ್)

ವಗೈರೆಗಳಿಂದ ಸುಮಾರು ಒಂದು ಕೋಟಿ 40ಲಕ್ಷ ರೂಪಾಯಿಗಳ ಆದಾಯ ಇದೆ. ಅನೇಕ ಮಾನ್ಯ ಸದಸ್ಯರು ಮಾತನಾಡುತ್ತಾ ಅರಣ್ಯ ಶಾಖೆಯಲ್ಲಿ ಇನ್ನೂ ಹೆಚ್ಚು ಆದಾಯ ಬರುವ ಅವಕಾಶವಿದೆ, ಅದನ್ನು ನೋಡಬೇಕು ಎಂದು ಹೇಳಿದ್ದಾರೆ. ನನಗನ್ನಿಸುತ್ತದೆ, ಮೈಸೂರು ಸಂಸ್ಥಾನದಲ್ಲಿ ನಾನಾಪ್ರಾಂತಗಳಲ್ಲಿ ನಾನಾರೀತಿಯ ಪದ್ಧತಿಯು ಬರುತ್ತದೆ. ಬಹುಶಃ ಮೊದಲನೆಯದಾಗಿ ಯೂನಿಫಾರ್ಮಿಟಿ ಆಫ್ ರಾಸ್ ಅಂಡ್ ರೂಲ್ಸ್ ಈ ಇಲಾಖೆಗೆ ಸಂಬಂಧಪಟ್ಟ ಹಾಗೆ ಮೊದಲು ತಂದರೆ ನಮ್ಮ ಅರಣ್ಯಬಾಬಿನಲ್ಲಿ, ಇನ್ನೂ ಹೆಚ್ಚಿಗೆ ಆದಾಯ ಬರುವುದಕ್ಕೆ ಅದು ಮೊದಲನೇ ತಳಹದಿ ಆಗುತ್ತದೆ ಎಂದು ಈ ಸಮಯದಲ್ಲಿ ಮಾನ್ಯ ಅರಣ್ಯಶಾಖೆಯ ಸಚಿವರಿಗೆ ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

2–30 P.M.

ಶ್ರೀ ಬಿ. ವೆಂಕಟೇಗೌಡ.—4 ವರ್ಷದಿಂದಲೂ ಹೇಳುತ್ತಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ಹೇಳುತ್ತಿದ್ದರೂ ಆಗಿಲ್ಲ. ಆದ್ದರಿಂದ ಈ ದಿನವೇ ಇದನ್ನು ಕೈಕೊಳ್ಳಬೇಕು. ಹೊಸ ಮಂತ್ರಿಗಳು ಬೇರೆ ಬಂದಿದ್ದಾರೆ. ಹುರುಪಿನಿಂದ ತರಲಿ ಎಂದು ಮತ್ತೆ ಹೇಳುತ್ತಿದ್ದೇನೆ.

ಇನ್ನೊಂದು ಸಲಹೆಯೇನೆಂದರೆ ಖಾಸಗೀ ಜನರಿಗೆ ಅರಣ್ಯದಿಂದ ನಾಟಾ ಮರಗಳನ್ನು ತರುವ ಪದ್ಧತಿಯನ್ನು ಇಲ್ಲಿಂದೀಚೆಗೆ ರದ್ದು ಮಾಡಬೇಕೆಂದು ನಾನು ಖಚಿತವಾಗಿ ಹೇಳುತ್ತೇನೆ.

ಒಬ್ಬ ಸದಸ್ಯರು.—ಯಾವುದನ್ನ?

ಶ್ರೀ ಡಿ. ದೇವರಾಜ ಅರಸ್.—ಹಳೆಯ ಮೈಸೂರಿನಲ್ಲಿ ಖಾಸಗಿ ಜನರಿಗೆ ಕೂಪ್ ಮಾರುವ ಅಧಿಕಾರ ಇಲ್ಲ. Soft wood ಆಗಲೀ, Classified wood ಆಗಲೀ, ಯಾವುದನ್ನೂ ಮಾರುವುದಕ್ಕೆ ಅವಕಾಶಕೊಟ್ಟಿಲ್ಲ. ಆದರೆ ಬೊಂಬಾಯಿ ಕರ್ನಾಟಕದಲ್ಲಿ ಈ ಪದ್ಧತಿಯಿದೆಯೆಂದು ಕಂಡುಬಂದಿದೆ. ಈ ಪದ್ಧತಿಯನ್ನು ರದ್ದುಮಾಡಿದ್ದೇ ಆದರೆ ದೇಶಕ್ಕೆ ಬಹಳ ಅನುಕೂಲವಾಗುತ್ತದೆ. ತಮಗೆ ಹಿಂದೆಯೇ ಗೊತ್ತಿರುವಹಾಗೆ ಖಾಸಗಿ ಜನರಿಗೆ ಯಾವ working plan ಇಲ್ಲದೆ, demarcation ಇಲ್ಲದೆ ಕಾಡುಗಳನ್ನು ಕೊಡುವುದರಿಂದ ದೇಶಕ್ಕೆ ಬಹಳ ಅನ್ಯಾಯವಾಗುತ್ತದೆ. ಹಿಂದೆ ದೊಡ್ಡಣ್ಣನವರಿಗೆ ಸಾವಿರಾರು ಟನ್ನುಗಳಷ್ಟು ಮರಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ಕೊಟ್ಟದ್ದು ಹೇಗಾಯಿತೆಂಬುದು ಎಲ್ಲರಿಗೂ ಗೊತ್ತಿದೆ. ಸಾರ್ವಜನಿಕರಿಗೆ ಅದರ ವಿಷಯದಲ್ಲಿ ಸಂಶಯ ಇದ್ದೇ ಇದೆ. ಈ ಅಂಶವನ್ನು ಪರಿಶೀಲನೆಮಾಡಿ, ಸರಿಯಾಗಿ ಕಾನೂನು ಪ್ರಕಾರ ನೋಡಿ ತಪ್ಪಿತಸ್ಥರು ಯಾರೆಂಬುದನ್ನು ಗೊತ್ತುಮಾಡಿ ಸಾರ್ವಜನಿಕರಿಗೆ ಇದುವರೆಗೂ ತಿಳಿಸದಿರುವುದು ಶೋಚನೀಯ. ಇಂಥ ಪ್ರಕರಣಗಳು ನಡೆಯುತ್ತಿರುವುದನ್ನು ನಿನ್ನೆತಾನೆ ಮಾತನಾಡಿದ ಕಾಮತ್‌ರವರು ಕೂಡ ತಿಳಿಸಿದ್ದಾರೆ. ಆದ್ದರಿಂದ ಈ ಬಗ್ಗೆ ತಾವು ಜರೂರಾಗಿ ನಿಗಾಕೊಡಬೇಕು. ಖಾಸಗಿ ಜನರಿಗೆ soft wood ಆಗಲೀ, ಯಾವುದೇ ಮರ ವನ್ನಾಗಲೀ ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ಕೊಡಬಾರದು. ಸರ್ಕಾರದವರೇ ನೇರವಾಗಿ ಕಡಿಸಿ ವ್ಯಾಪಾರಕ್ಕೆ ಕೊಡಬೇಕೆಂದು ಸಲಹೆಯನ್ನು ತಮ್ಮ ಮುಂದೆ ಇಡುತ್ತೇನೆ.

ಗಂಧದ ಮರದ ವಿಚಾರವಾಗಿ ಕೆಲವು ಸಲಹೆಗಳು ಬಂದಿವೆ. ಇದು ನಮ್ಮ ಸರ್ಕಾರಕ್ಕೆ ಮುಖ್ಯವಾಗಿ ರೆವಿನ್ಯೂ ತರತಕ್ಕ ಬಾಬು. ನಮ್ಮ ಸಾಂಡಲ್ ಆಯಿಲ್ ಫ್ಯಾಕ್ಟರಿಗೆ ಈ ಸಲ 80 ಲಕ್ಷ ರೂಪಾಯಿಗಳ ಆದಾಯ ಬರುವಷ್ಟು ಗಂಧದ ಮರದ ವ್ಯಾಪಾರ ಮಾಡಿದೆಯೆಂದು ಹೇಳಿದರು, ನಮ್ಮ ಸರ್ಕಾರದವರು ನೇರವಾಗಿ ವರ್ಷ ವರ್ಷ ಸುಮಾರು 2,800 ಟನ್ ಗಂಧದ

ಮರವನ್ನು ಅರಣ್ಯದಿಂದ ತೆಗೆಯುತ್ತಿದ್ದಾರೆಂದ ಅಂಕಿ ಅಂಶಗಳಿಂದ ಗೊತ್ತಾಗಿದೆ. ಆದರೆ ಇಷ್ಟೊಂದು ಗಂಧವನ್ನು ನಾವು ಆಯಿಲ್ ಫ್ಯಾಕ್ಟರಿಗೆ ಕೊಡುತ್ತಿದ್ದರೂ ನಮಗೆ ಬರುತ್ತಿರುವ ಹಣ ಹೆಚ್ಚಿಲ್ಲ. ನಮಗೆ ಕೊಡರಾಗುತ್ತಿರುವ ದರ ಮಾರ್ಕೆಟ್ ರೇಟಿಗಿಂತ ಬಹಳ ಕಡಿಮೆ ಯಾಗಿದೆ ಯೆಂದು ತಿಳಿದು ಬಂದಿದೆ. ಇನು ಮೇಲೆ, ಮಾರ್ಕೆಟ್ ರೇಟಿಗೆ ಕೊಡುವುದಾದರೆ, ನಮಗೆ ಇನ್ನೂ ಹೆಚ್ಚಿಗೆ ಆದಾಯ ಬರುವುದಕ್ಕೆ ಅವಕಾಶವಿದೆ. ಆಮೇಲೆ, ಗಂಧದ ಮರ ಕಳುವಾಗುತ್ತಿರುವುದನ್ನು ತಪ್ಪಿಸುವುದು ನಮ್ಮ ಇನ್ನೊಂದು ಮುಖ್ಯವಾದ ಕರ್ತವ್ಯ. ಹೆಗ್ಗಡದೇವನ ಕೋಟೆಯ ಕಡೆ ಅನೇಕವಾಗಿ ಕೇರಳ ಪ್ರಾಂತ್ಯದ ಕಡೆಗೆ ಜನರು ಕದ್ದು ಇದನ್ನು ಕೊಂಡೊಯ್ಯುತ್ತಿದ್ದಾರೆಂದು ಹೇಳಿ, ಹಿಂದೆ ಈ ಖಾತೆಯಲ್ಲಿ ಕೆಲಸಮಾಡುತ್ತಿದ್ದ ಮಂತ್ರಿಗಳಿಗೆ ಅರ್ಜಿಕೂಡ ಕೊಟ್ಟಿದ್ದೆವು. ಆದರ ಮೇಲೆ ಕಾರ್ಯಕ್ರಮ ತೆಗೆದುಕೊಂಡರೂ, ಇನ್ನೂ ಅಲ್ಲಿ ಸಾಕಷ್ಟು ಬಂದೋಬಸ್ತು ಮಾಡಿಲ್ಲವೆಂದು ಗೊತ್ತಾಗಿದೆ. ಈಗಲೂ ಗಂಧದ ಮರದ ಕಳ್ಳತನ ವಾಗುತ್ತಿರುವುದನ್ನು ನಾವು ಕೇಳುತ್ತಿದ್ದೇವೆ. ಇದಕ್ಕೆ ತಕ್ಕ ಬಂದೋಬಸ್ತು ಮಾಡಬೇಕೆಂದು ನಾನು ಹೇಳುತ್ತೇನೆ.

ಈ ಸಂದರ್ಭದಲ್ಲಿ ಒಂದು ವಿಚಾರವನ್ನು ತಾವು ಗಮನಿಸಬೇಕು. ಅರಣ್ಯ ಇಲಾಖಾ ಅಧಿಕಾರಿಗಳು ಯಾವುದೇ ಬಂದೋಬಸ್ತು ಮಾಡಬೇಕಾದರೂ ಪೋಲೀಸಿನವರಿಗೆ ತಿಳಿಸಿ ಅವರ ಸಹಾಯ ತೆಗೆದುಕೊಂಡು ಮಾಡುವುದೆಂದರೆ ಬಹಳ ಕಷ್ಟ. ಇದಕ್ಕಾಗಿ ಅರಣ್ಯ ಇಲಾಖೆಗೆ ಬೇಕಾದ ಸಿಬ್ಬಂದಿ, ವಾಹನ ಸೌಕರ್ಯ ಕೊಟ್ಟು ಒಂದು squad ಏರ್ಪಡಿಸಿ ಎಲ್ಲೆಲ್ಲಿ ಕಳುವಾಗುತ್ತಿದೆಯೆಂದು ಕೇಳಿಬರುತ್ತದೋ ಅಲ್ಲಿಗೆ ಜಾಗ್ರತೆ ಹೋಗಿ ತಕ್ಕ ಬಂದೋಬಸ್ತು ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಆಮೇಲೆ, ಗಂಧದ ಮರ ಕಡಿಯುವುದಕ್ಕಿರುವ ರೂಲ್ಸನಲ್ಲೂ ಸ್ವಲ್ಪ ವ್ಯತ್ಯಾಸಗಳಿವೆ. ಹಳೆಯ ಮೈಸೂರಿನಲ್ಲಿರತಕ್ಕ ಪದ್ಧತಿಯ ಪ್ರಕಾರ, ಸಾರ್ವಜನಿಕರು ಯಾರೂಕೂಡ, ಅದನ್ನು ತಮ್ಮ ಸ್ವಂತ ಸ್ವತ್ತಾಗಿ ಉಪಯೋಗಮಾಡುವುದಕ್ಕಾಗಲಿ, ಅದನ್ನೂ ವ್ಯಾಪಾರ ಮಾಡುವುದಕ್ಕಾಗುವುದಕ್ಕಾಗಲಿ ಅವಕಾಶವಿಲ್ಲ. ಆದರೆ integrated area ಗಳಲ್ಲಿ ಗಂಧದ ಮರವನ್ನು ಯಾರೇ ಆಗಲೀ ಸ್ವಂತವಾಗಿ ವ್ಯಾಪಾರಮಾಡುವುದಕ್ಕೆ ಅವಕಾಶವಿದೆಯೆಂದು ಕೇಳಿದ್ದೇನೆ.

ಒಬ್ಬ ಸದಸ್ಯರು.—Permission ಪಡೆಯಬೇಕು.

ಶ್ರೀ ಡಿ. ದೇವರಾಜ ಅರಸ್.—ಇಲ್ಲ ಹಾಗೂ ಇಲ್ಲ. ಸ್ವಂತವಾಗಿ ತೆಗೆದುಕೊಂಡು ಹೋಗುವುದಕ್ಕೆ ಅವಕಾಶವೇ ಇಲ್ಲ. ಈ ರೀತಿ ಅಲ್ಲಿ ಇರುವುದರಿಂದ ಖಾಸಗಿ ಜನರು ಯಾವರೀತಿ exploit ಮಾಡುತ್ತಿದ್ದಾರೆಂಬುದಕ್ಕೆ ಅಂಕಿ ಅಂಶಗಳಿಲ್ಲ. ಆದ್ದರಿಂದ ಇದನ್ನು ಅಲ್ಲಿಯೂ ನಿಲ್ಲಿಸಿದರೆ, ಸರ್ಕಾರದವರ ಸ್ವತ್ತಾಗಿ ಮಾಡಿಕೊಂಡರೆ, ನಮಗೆ ಈಗ ಬರುವುದಕ್ಕಿಂತ ಹೆಚ್ಚು ಆದಾಯ ಹೊಂದುವುದಕ್ಕೆ ಅವಕಾಶವಿದೆ.

ಮತ್ತೊಂದು ವಿಷಯ: ಈಗ ನಮ್ಮ ಗಂಧದ ಕಾರ್ಖಾನೆಗೆ ಕೊಡುವುದಕ್ಕೆ ನಮ್ಮ ಕಾಡಿನಲ್ಲಿ ಸಿಕ್ಕುವ ಗಂಧದ ಮರ ಸಾಕಾಗುವುದಿಲ್ಲವೆಂದು ಗೊತ್ತಾಗಿದೆ.

ಶ್ರೀ ಜಿ. ವೆಂಕಟೇಗೌಡ.—ರೈತರಿಗೆ compensation ಕೊಡುವ ವ್ಯವಸ್ಥೆಯಿಲ್ಲವೇ ಹಳೆಯ ಮೈಸೂರಿನಲ್ಲಿ?

ಶ್ರೀ ಡಿ. ದೇವರಾಜ ಅರಸ್.—ರೈತರಿಗೆ ಕೊಡುವ ಕಾಂಪೆನ್‌ಸೇಷನ್ ಆದರೋ ಯಾವಕಾಲದಲ್ಲಿ ಗಂಧದ ಮರ ಕಡಮೆ ಇತ್ತೊ ಆ ಕಾಲದಲ್ಲಿ ಗೊತ್ತುಮಾಡಿದಂಥಾದ್ದು. ಈಗಲಾದರೋ ಗಂಧದ ಮರಕ್ಕೆ 4–5–8 ಸಾವಿರ ರೂಪಾಯಿಗಳವರೆಗೂ ಬೆಲೆಯಿದೆ. ಇಂಥ ಕಾಲದಲ್ಲಿ ಒಂದು

(ಶ್ರೀ ಡಿ. ದೇವರಾಜ ಅರಸ್)

ಟನ್ ಗಂಧದ ಮರ ಕೊಟ್ಟರೆ 10 ರೂಪಾಯಿ ಕೊಡುತ್ತೇವೆಂದರೆ ಹೇಗೆ? ಟನ್‌ಗೆ 8,000 ರೂಪಾಯಿ ಬೆಲೆ ಇರುವಾಗ 10 ರೂಪಾಯಿ ಕೊಟ್ಟರೆ ಏನಾದಂತಾಯಿತು? ಆದ್ದರಿಂದ ಇದನ್ನು ತಕ್ಷಣ ಬದಲಾವಣೆ ಮಾಡಿ ಖಾಸಗೀ ಜನರಿಗೂ ಆಕರ್ಷಕವಾಗಿರುವ ರೀತಿಯಲ್ಲಿ ಕಾಂಪೆನ್‌ಸೇಷನ್ ಕೊಡುವುದಾದರೆ, ಖಾಸಗೀ ಜನರೂ ಹೆಚ್ಚಿಗೆ ಮುತುವರ್ಜಿಯಿಂದ ಇದನ್ನು ನೋಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಎಂ. ಸಿ. ನರಸಿಂಹನ್.—ಏಕ ಇಲ್ಲಿಯವರಗೂ ಇದನ್ನು ಯೋಚನವಾಡಲಿಲ್ಲವೂ?

ಶ್ರೀ ಡಿ. ದೇವರಾಜ ಅರಸ್.—ಏಕೆಂದು ಹೇಳುವುದಕ್ಕೆ ಈಗ ಕಾಲಾವಕಾಶವಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಗಂಧದ ಮರಕ್ಕೆ ಏನು ಕಾಂಪೆನ್‌ಸೇಷನ್ ಇದೆಯೆಂದು ತಾವು ಹೇಳುತ್ತಿದ್ದಿರೋ ಅದನ್ನು ಕೂಡ ಅವರಿಗೆ ಕೊಡುತ್ತಿಲ್ಲ. ಈ ಕಾರಣ ರೈತರು ಅದನ್ನು ಸೌದೆಗೆ ಉಪಯೋಗಿಸುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಆದ್ದರಿಂದ ರೈತರಿಗೆ ಸರಿಯಾಗಿ ಕಾಂಪೆನ್‌ಸೇಷನ್ ಕೊಟ್ಟರೆ ಅವರೂ ಅದನ್ನು ಚೆನ್ನಾಗಿ ರಕ್ಷಣೆಮಾಡಿ ಬೆಳೆಸಿ ಸರ್ಕಾರದವರಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಏನೇ ಆಗಲಿ; ಸರ್ಕಾರದವರು ಈ ವಿಷಯವನ್ನು ಕಡ್ಡಾಯವಾಗಿ ಮಾಡಬೇಕೆಂದು ಹೇಳುತ್ತೇನೆ. ಮತ್ತು ಖಾಸಗಿಯವರಿಗೆ exploit ಮಾಡುವುದಕ್ಕೆ ಅವಕಾಶ ತಪ್ಪಿಸಬೇಕು. ಈ ಬಗ್ಗೆ ಕಾನೂನು ಬದಲಾವಣೆ ಮಾಡುವುದಾಗಲಿ, ಅಥವಾ ಹೊಸದಾಗಿ ಕಾನೂನು ಮಾಡುವುದಾಗಲೀ ಇದ್ದರೂ ಕೂಡ ಈ ಸೆಷನ್ನಿನಲ್ಲೇ ತರಬೇಕೆಂದು ಹೇಳುತ್ತೇನೆ.

ಗಂಧದ ಮರಕ್ಕೆ ಒಂದು ರೀತಿಯ ರೋಗ ಬರುತ್ತದೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಸಂದರ್ಭದಲ್ಲಿ ಒಂದೇ ಒಂದು ಸಲಹೆ ಮಾಡುತ್ತೇನೆ.

ಅಧ್ಯಕ್ಷರು.—ತಮ್ಮ ಅಭಿಪ್ರಾಯ ಖಾಸಗೀ ಜನರಿಗೆ ಗಂಧದ ಮರವನ್ನು ಕಡಿಯುವುದಕ್ಕೆ ಅವಕಾಶ ಕೊಡಬಾರದು, ಸರ್ಕಾರದವರು ಮಾತ್ರವೇ ಅದನ್ನು exploit ಮಾಡಬೇಕು, ಖಾಸಗಿಯವರ ಮರಕ್ಕಾಗಿ ಪೂರ್ತಿ ಕಾಂಪೆನ್‌ಸೇಷನ್ ಕೊಡಬೇಕೆಂಬುದಲ್ಲವೇ?

ಶ್ರೀ ಡಿ. ದೇವರಾಜ ಅರಸ್.—ಪೂರ್ತಿ ಕಾಂಪೆನ್‌ಸೇಷನ್ ಅಲ್ಲ. ಅವರು ಗಂಧದಮರವನ್ನು ಕಡಿಯುವುದಕ್ಕೆ ಅವಕಾಶವಿಲ್ಲದ ಹಾಗೆ ಆಕರ್ಷಕವಾಗಿರುವಂತೆ ಮಾಡಬೇಕು. ಈಗ ಅನೇಕ ಕಡೆ ಕಡಿದು ಒಲೆಗೆ ಹಾಕುತ್ತಿದ್ದಾರೆ. ಸುಮಾರು 8,000 ರೂಪಾಯಿಗಳು ಸರ್ಕಾರಕ್ಕೆ ಬರುವಾಗ 500–1,000 ರೂಪಾಯಿಗಳವರೆಗಾದರೂ ಅವರಿಗೇಕೆ ಕೊಡಬಾರದು. ಹೀಗೆ ಮಾಡುವುದರಿಂದ ಅಪ್ರತ್ಯಕ್ಷವಾಗಿ ಅವರಿಗೆ ಸಹಾಯ ಮಾಡಿದಂತಾಗುತ್ತದೆ. ಮತ್ತು ಗಂಧವನ್ನು ಪೋಷಿಸುವುದಕ್ಕೆ ಉತ್ತೇಜನ ಕೊಟ್ಟಂತೆಯೂ ಆಗುತ್ತದೆ.

Spike disease ವಿಚಾರದಲ್ಲಿ ಅರಣ್ಯ ಶಾಖೆಗೆ ಸಂಬಂಧಪಟ್ಟ ಹಾಗೆ ಒಂದು ಶಾಖೆಯನ್ನೇರ್ಪಡಿಸಿ ಒಬ್ಬರು ಪ್ಯಾಥಾಲಜಿಸ್ಟ್ ನೇಮಕ ಮಾಡಿ ಸಂಶೋಧನೆ ನಡೆಸುವುದು ಅತ್ಯಗತ್ಯ. ಈ ರೋಗದಿಂದ ಗಂಧದ ಮರಕ್ಕೆ ಬಹಳ ಧಕ್ಕೆ ತಗಲುತ್ತಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—Bureau of Scientific and Industrial Research ಎಂದು 20 ವರ್ಷಗಳಿಂದ ಇಟ್ಟಿದ್ದಾರೆ. ಅವರು ಸಂಶೋಧನೆ ನಡೆಸುತ್ತಿದ್ದಾರೆ. They did it in collaboration with the Government of Madras. They have failed and the matter is even now being taken up on higher level.

Sri D. DEVARAJ URS.—Still we have to go on with the research. On that account we cannot give up. ಸ್ವಾಮಿ, ಅರಣ್ಯ ನಾನಾರೀತಿಯಿಂದ ಬಹು ಬೇಗ ಕ್ಷೀಣವಾಗುತ್ತಿದೆ. Exploitation ಬಹಳ ಹೆಚ್ಚಾಗಿದೆ. ಸಾದೆ ಮತ್ತು ಮರಮುಟ್ಟು ಗಳು, ಇದ್ದಲು ಇವುಗಳಿಗಾಗಿ ಮರಗಳು ಹೆಚ್ಚು ಹಾಳಾಗುತ್ತಿವೆ. ಆದಕಾರಣ ರಕ್ಷಣೆ ಕೊಡ ಬೇಕೆಂದು ಕೇಳುತ್ತಿದ್ದೇವೆ. ಸಾದೆಯ ಸಮಸ್ಯೆ ಪಟ್ಟಣಗಳಲ್ಲಿಯೂ ಇದೆ, ಹಳ್ಳಿಗಳಲ್ಲಿಯೂ ಇದೆ.

Mr. SPEAKER:—The House will now rise and meet after half an hour.

The House adjourned for recess at Two Minutes past Three of the Clock and reassembled at Forty Minutes past Three of the Clock.

(Mr. SPEAKER in the Chair)

ಶ್ರೀ ಡಿ. ದೇವರಾಜ್ ಅರಸ್.—ಸ್ವಾಮಿ, ದೊಡ್ಡ ದೊಡ್ಡ ಪಟ್ಟಣಗಳಿಗೆ ಸೌದೆ ಸಾಗಾಣಿಕೆ ಯಿಂದ ಅರಣ್ಯಗಳಿಗೆ ಬಹಳ ಧಕ್ಕೆ ಇದೆಯೆಂದು ನಾನು ಹೇಳುತ್ತಿದ್ದೆ. ಇದನ್ನು ತಪ್ಪಿಸಬೇಕಾ ಗಿದೆ. ಇದನ್ನು ತಪ್ಪಿಸುವುದು ಬಹಳ ಕಷ್ಟವಾಗಿದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಇಂತಹ ಪ್ರಾಬ್ಲಮ್ಸ್‌ನ್ನು ಸಾಲ್ವ್ ಮಾಡಿದರೆ ಅರಣ್ಯಸಂಪತ್ತನ್ನು ಹೆಚ್ಚಿಸಬಹುದು. ಸೌದೆಗಾಗಿ ಕಾಡಿ ನಲ್ಲಿರತಕ್ಕ ಲಕ್ಷಾಂತರ ಮರಗಳನ್ನು ಕಡಿದು ಅದರ ಸಂಪತ್ತನ್ನು ಹಾಳು ಮಾಡುತ್ತಿರುವುದನ್ನು ಮೊಟ್ಟಮೊದಲನೆಯದಾಗಿ ತಪ್ಪಿಸುವುದಕ್ಕೆ ಸರ್ಕಾರದವರು ತೀವ್ರ ಪರ್ಯಾಲೋಚನೆ ಮಾಡು ವುದು ಅಗತ್ಯವಾಗಿದೆ. ಕಾಡಿನ ಮರವನ್ನು ಯಾವ ರೀತಿ ಉಪಯೋಗಿಸಬೇಕೆಂಬುದನ್ನು ಸರ ಕಾರದವರು ಬಹು ಸೂಕ್ಷ್ಮವಾಗಿ ಯೋಚನೆ ಮಾಡಬೇಕು. ನನ್ನ ಮಿತ್ರರಾದ ಮಾನ್ಯ ಶ್ರೀ ಮಲ್ಲಪ್ಪನವರು ಮಾತನಾಡುತ್ತಾ ಈಗಿನ ಡಿ. ಎಫ್. ಒ. ಆಫೀಸನ್ನು ಹುಣಸೂರಿಗೆ ಹಾಕಿ ದ್ದಾರೆ, ಇದು ಸರಿಯಲ್ಲವೆಂದು ಹೇಳಿದ್ದಾರೆ. ಆದರೆ ಹುಣಸೂರಿಗೆ ಇದನ್ನು ಯಾಕೆ ಹಾಕಿದ್ದಾ ರೋ ಎನ್ನುವುದು ನನಗೆ ತಿಳಿಯದು. ಇದಕ್ಕೆ ಕಾರಣವೇನೆಂಬುದೂ ಸಹ ನನಗೆ ಗೊತ್ತಾಗಲಿಲ್ಲ. ಸರ್ಕಾರದವರಿಗೆ ನಾನು ಈರೀತಿ ಅಲ್ಲಿಗೆ ಆಫೀಸನ್ನು ಬದಲಾವಣೆಮಾಡಿ ಎಂದೇನೂ ಹೇಳಲಿಲ್ಲ. ಅವರು ಬೇಡ ಎಂದು ಹೇಳಿದರೋ ಏನೋ ನನಗೆ ಅರ್ಥವಾಗಲಿಲ್ಲ. ನನ್ನ ಕ್ಷೇತ್ರದಲ್ಲಿ ಇಂತಹ ಕಡೆ ಹಾಕಿ ಅಂತಹ ಕಡೆ ಹಾಕಿ ಎಂದು ನಾನೇನೂ ಈ ಬಗ್ಗೆ ಇಂಟರ್‌ಫಿಯರ್ ಆಗಲಿಲ್ಲ. ಸರ್ಕಾರದವರಿಗೆ ಅಲ್ಲಿ ಹೆಚ್ಚಿನ ಅನುಕೂಲತೆಗಳು ಇರಬಹುದೆಂದು ತಿಳಿದು ಆ ಆಫೀಸನ್ನು ಅಲ್ಲಿಗೆ ಇಲಾಖೆಯ ದೃಷ್ಟಿಯಿಂದ ಹಾಕಿರುತ್ತಾರೆಂದು ನಾನು ಹೇಳುತ್ತೇನೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಹುಣಸೂರಿಗೆ ಆ ಆಫೀಸನ್ನು ಹಾಕಿದ್ದರಿಂದ ನಿಮ್ಮದೇನಾ ದರೂ ಅಬ್‌ಜಕ್ಷನ್ ಉಂಟೋ ?

ಶ್ರೀ ಡಿ. ದೇವರಾಜ್ ಅರಸ್.—ನನ್ನದೇನೂ ಇಲ್ಲ. ಹಾಕಿದ್ದನ್ನು ಪುನಃ ತೆಗೆಯಬೇಡಿ. ಇನ್ನು ಖಾದಿ ಬೋರ್ಡಿನವರು ಕೆಲವು ಸೊಸೈಟಿಗಳಲ್ಲಿ ಸಣ್ಣ ಪುಟ್ಟ ಗ್ರಾಮೋದ್ಯೋಗಗಳನ್ನು ಮಾಡುವುದಕ್ಕಾಗಿ ಪ್ರಾರಂಭಿಸಿದ್ದಾರೆ. ಕೊ-ಆಪರೇಟಿವ್ ಡಿಪಾರ್ಟ್‌ಮೆಂಟಿನವರೂ ಸಹ ಕೆಲವು ಸೊಸೈಟಿಗಳನ್ನು ಮಾಡಿದ್ದಾರೆ. ಈ ಸೊಸೈಟಿಗಳಿಗೆ ಅರಣ್ಯಶಾಖೆ ಕೆಲವು ಸಾಮಾನು ಗಳನ್ನು ಕೊಡುವ ಅಗತ್ಯವಿದೆ. ಅವುಗಳಿಂದ ಸಣ್ಣ ಪುಟ್ಟ ಕೈಗಾರಿಕೆಗಳಿಗೆ ಬಹಳ ಅನುಕೂಲ ವಾಗಿದೆ. ಅದರಲ್ಲೂ ಮನೆಗಳನ್ನು ಕಟ್ಟಬೇಕಾದರೆ ಬೊಂಬು ಅಗತ್ಯವಾಗಿ ಬೇಕಾಗಿರುತ್ತೆ. ತೆಂಗಿನಮರವೂ ಅಗತ್ಯ ಬೇಕಾಗಿದೆ. ಕಾಡಿನಲ್ಲಿ ನಾಟಾಮರಗಳನ್ನು ಟಿಂಬರ್‌ಗೋಸ್ಕರ ತೆಗೆದು ಕೊಳ್ಳುತ್ತಾರೆ. ಅದನ್ನು ಸಹ ಸೊಸೈಟಿಗಳಿಗೆ ಕೊಡಬೇಕು. ಯಾರಿಗೆ ನೇರವಾಗಿ ನಿಜವಾಗಿ

(ಶ್ರೀ ಡಿ. ದೇವರಾಜ್ ಅರಸ್)

ಅವನ್ನು ಉಪಯೋಗ ಮಾಡಲಿಕ್ಕೆ ಅನುಕೂಲವಿದೆಯೋ ಅಂತಹ ರೈತರಿಗೆ ಮಾತ್ರ ಫ್ರೀಯಾಗಿ ಲೈಸನ್ಸ್ ಕೊಡಬೇಕು. ರಿಯಾಯಿತಿ ದರದಲ್ಲಿ ಮರದ ಸಾಮಾನುಗಳನ್ನು ಒದಗಿಸಬೇಕು ಎಂಬುದಾಗಿ ನಾನು ಹೇಳುತ್ತೇನೆ. ಗಾಡಿಗಳನ್ನು ಮಾಡುವುದಕ್ಕೆ ಮರ ಅಗತ್ಯವಾಗಿ ಬೇಕು. ಒಬ್ಬ ರೈತ ಒಂದು ಗಾಡಿಯನ್ನು ಮಾಡಬೇಕಾದರೆ ಅವನು ಸಾಮಾನ್ಯವಾಗಿ 600 ರೂಪಾಯಿಗಳನ್ನು ಕೊಡಬೇಕು. ಮೊದಲು 200 ರೂಪಾಯಿಗಳಿದ್ದುದು ಈಗ 500-600 ರೂಪಾಯಿಗಳನ್ನು ಕೊಡಬೇಕಾಗಿದೆ. ಅದರೂ ಕೆಳದರ್ಜೆಯ ಗಾಡಿಯೇ ಸಿಕ್ಕುತ್ತದೆ. ಸರ್ಕಾರ ನೇರವಾಗಿ ರೈತರಿಗೆ ಇದಕ್ಕಾಗಿ ಹಣ ಸಹಾಯ ಮಾಡಬೇಕು. ಪಟ್ಟೆ ಒಂದು ಕಂಟ್ರೋಲ್ ರೇಟಿನಲ್ಲಿ ಸಿಕ್ಕುವುದೂ ಕಷ್ಟ ನಾಟಾ ಯಾವ ರೂಪದಲ್ಲೂ ಸಿಕ್ಕುತ್ತಿಲ್ಲ. ತೇಗದಮರ ಐದು ರೂಪಾಯಿಗಳಿದ್ದುದು ಈಗ 20–25–30 ರೂಪಾಯಿಗಳಿಗೆ ಹೋಗಿದೆ. ಆದ್ದರಿಂದ ಸರ್ಕಾರದವರು ರೈತರ ಅನುಕೂಲಕ್ಕೋಸ್ಕರ ಗಾಡಿ ಮಾಡುವುದಕ್ಕೆ ಅಗತ್ಯವಾಗಿ ಬೇಕಾದ ಒಳ್ಳೆಯ ಜಾತಿಯ ಮರವನ್ನು ಒದಗಿಸಿ ಕೊಡುವುದಕ್ಕೆ ಯಾವುದಾದರೂ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದೂ ಆ ಬಗ್ಗೆ ಅವರು ತೀವ್ರವಾಗಿ ಯೋಚನೆ ಮಾಡಬೇಕೆಂದೂ ಸಹ ನಾನು ಸಲಹೆ ಮಾಡುತ್ತೇನೆ.

ಇನ್ನು ಕಾಲಾವಕಾಶ ನನಗೆ ಬಹಳ ಕಡಮೆ ಇರುವುದರಿಂದ ಅರಣ್ಯ ಶಾಖೆಯ ವಿಷಯವನ್ನು ಇಲ್ಲಿಗೇ ಬಿಟ್ಟು ನಮ್ಮ ಸರ್ಕಾರದವರು 1961–62 ನೇ ಸಾಲಿನಲ್ಲಿ ಆಯವ್ಯಯದಲ್ಲಿ ಒದಗಿಸಿರುವ ಸುಮಾರು 16 ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ವಿದ್ಯಾ ಇಲಾಖೆಯ ವಿಚಾರದಲ್ಲಿ ಒಂದೆರಡು ಮಾತುಗಳನ್ನು ತಮ್ಮ ಮುಂದೆ ಹೇಳ ಬಯಸುತ್ತೇನೆ.

ಮೂರನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಒಂದು ತತ್ವವನ್ನು ಹಾಕಿಕೊಂಡು ಆ ಸಂಬಂಧವಾಗಿ ಬಹು ಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ನಾನು ಸೆಕೆಂಡರಿ ಶಿಕ್ಷಣದ ವಿಷಯಕ್ಕೆ ಸಂಬಂಧಪಟ್ಟಹಾಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ನಮ್ಮ ಸಂಸ್ಥಾನದಲ್ಲಿ ಇನ್ನು ಮುಂದೆ ಇನ್ನೈದು ವರ್ಷಗಳಲ್ಲಿ 10 ಹೈಸ್ಕೂಲುಗಳನ್ನು ಮಾತ್ರ ಸರ್ಕಾರದಿಂದ ತೆಗೆಯುತ್ತೇವೆ. ಬಾಕಿ 200 ಹೈಸ್ಕೂಲುಗಳನ್ನು ಪ್ರೈವೇಟ್ ಸೆಕ್ಟರ್ ಅಂದರೆ ಖಾಸಗಿ ಸಂಸ್ಥೆಯವರು ಮುಂದೆ ಬಂದರೆ ಅವರಿಗೆ ಕೊಡುತ್ತೇವೆಂದು ಒಂದು ಪಾಲಿಸಿಯನ್ನು ಈ ಯೋಜನೆಯಲ್ಲಿ ಸರ್ಕಾರದವರು ನಮೂದು ಮಾಡಿದ್ದಾರೆ. ಈಗ ನಮ್ಮ ಸಂಸ್ಥಾನದಲ್ಲಿ ಎಲ್ಲಾ ಜಿಲ್ಲೆಗಳಲ್ಲಿಯೂ ಹೈಸ್ಕೂಲುಗಳು ಯಾವ ರೀತಿ ಡಿಸ್ಟ್ರಿಬ್ಯೂಟ್ ಆಗಿವೆ ಎಂಬುದನ್ನು ಸ್ವಲ್ಪ ಅವಲೋಕಿಸಿ ನೋಡುವುದಾದರೆ ಬೆಂಗಳೂರು ಪಟ್ಟಣದಲ್ಲಿ ಬಹುಶಃ ರಫ್ ಫಿಗರ್ ಕೊಡುವುದಾದರೆ 58 ನೇ ಇಸವಿಯ ಅಂಕಿ ಅಂಶಗಳ ಪ್ರಕಾರ 58 ಹೈಸ್ಕೂಲುಗಳು ಬರೀ ಈ ಸಿಟಿಯಲ್ಲಿಯೇ ಇವೆ. ಎರಡನೇಯ ಪಾಂಚವಾರ್ಷಿಕ ಯೋಜನೆಯ ಅಂತ್ಯಕ್ಕೆ ಸುಮಾರು 215 ಸ್ಕೂಲುಗಳನ್ನು ಹೊಸದಾಗಿ ತೆರೆದಿದ್ದಾರೆ. ಅದರಲ್ಲಿಯೂ ಬಹುಶಃ 20–30 ಬೆಂಗಳೂರಿನಲ್ಲಿಯೇ ಆಗಿವೆ. ಇದರಲ್ಲಿ ಖಾಸಗೀ ಮತ್ತು ಸರ್ಕಾರೀ ಹೈಸ್ಕೂಲುಗಳೂ ಸೇರಿವೆ. ಅಂದಮೇಲೆ ಒಂದು ಲಕ್ಷ ಪ್ರಜೆಗಳಿಗೆ ಸಿಟಿ ಅಂಕಿಅಂಶದ ಪ್ರಕಾರ 6–7 ಸ್ಕೂಲುಗಳಾಗುತ್ತವೆ. ಕೆಲವು ಜಿಲ್ಲೆಗಳಲ್ಲಿ ಸುಮಾರು ಒಂದು ಲಕ್ಷ ಜನಸಂಖ್ಯೆಗೆ 3–4 ಸೂಲ್ಕುಗಳು ಆಗುತ್ತವೆ. ಹೀಗೆ ಮಾಡಿ ಬಹಳ ಕನಿಷ್ಠಾಂಶದ ಸೆಕೆಂಡರಿ ಶಿಕ್ಷಣ ಮಾಡಿದ್ದಾರೆ. ಸ್ಕೂಲುಗಳು ಎಲ್ಲೆಲ್ಲಿ ಮಾಡಿದ್ದಾರೆ ಯಾವಾವುವು ಎಂಬುದನ್ನು ಸಹ ಹೇಳಲಿಲ್ಲ ಇನ್ನೂ ರಾಯಚೂರ್, ಬಿದರೆ ಜಿಲ್ಲೆಗಳನ್ನು ತೆಗೆದುಕೊಂಡರೆ $1\frac{1}{2}$ ಲಕ್ಷ ಪ್ರಜೆಗಳಿಗೆ ಒಂದೆರಡು ಹೈಸ್ಕೂಲುಗಳಿವೆ. ಈ ರೀತಿ ಮಾಲ್ ಡಿಸ್ಟ್ರಿಬ್ಯೂಟ್ ಆಗುವುದಕ್ಕೆ ಕಾರಣವೇನು ? ಬಹುಶಃ ಸರ್ಕಾರದಲ್ಲಿ ಏನೊಂದು ಗೀತಿ ಇತ್ತೊ ಅದನ್ನು ಈಗ ಪ್ರತಿಭಟನೆ ಮಾಡಿದ್ದಾರೆ. ಖಾಸಗೀ ಸಂಸ್ಥೆಗಳು ಮುಂದೆ ಬಂದರೆ ಹೆಚ್ಚುಕಡಿಮೆ ಹೈಸ್ಕೂಲುಗಳನ್ನು ಕೊಟ್ಟುಬಿಡುತ್ತೇವೆಂದು ಹೇಳುತ್ತಿರುವುದರಿಂದಲೇ ಈ ರೀತಿಯಾದ ಒಂದು ಮಾಲ್ ಡಿಸ್ಟ್ರಿ

ಬ್ಯೂಷನ್ನಿಗೆ ಬಹಳ ಮಟ್ಟಿಗೆ ಕಾರಣವಾಗುತ್ತದೆ. ಆದರೆ ಸರ್ಕಾರದವರು ಈ 10 ಹೈಸ್ಕೂಲುಗಳನ್ನು ಕೊಡಬೇಕಾದರೆ ಯಾವ ರೀತಿ ಕೊಡುತ್ತಾರೆ ಎಂದರೆ ಶೇ. 75 ಭಾಗದಷ್ಟು ಸರ್ಕಾರದವರು ಕೊಡುವುದು ಇನ್ನು ಶೇ. 25 ಭಾಗದಷ್ಟನ್ನು ನಮ್ಮ ಖಾಸಗೀ ಜನರು ಕೊಡತಕ್ಕದ್ದು ಎಂದು ಮಾಡಿದ್ದಾರೆ. ಬಜೆಟ್ಟಿನಲ್ಲಿ ನೋಡಿದರೆ ಸೆಕೆಂಡರಿ ಶಿಕ್ಷಣಕ್ಕೆ ಗ್ರಾಂಟು ಕೊಟ್ಟಿದ್ದಾರೆ. ನಾನ್ ಗೌರ್ನಮೆಂಟ್ ಸೆಕೆಂಡರಿ ಸ್ಕೂಲುಗಳಿಗೆ ಸರ್ಕಾರದಿಂದಲೇ ಗ್ರಾಂಟು ಕೊಟ್ಟಿದ್ದಾರೆ. ಈ ಬಾಬಿಗೆ 77,22,900 ರೂಪಾಯಿಗಳನ್ನು ಬಜೆಟ್ಟಿನಲ್ಲಿ ಒದಗಿಸಿದ್ದಾರೆ. ಲೋಕಲ್ ಬಾಡೀಸ್‌ಗೆ 41 ಲಕ್ಷ ಚಿಲ್ಲರೆ ಇರಬಹುದು. ಒಟ್ಟು ಈ ಸಾಲಿನಲ್ಲಿ 2 ಕೋಟಿ 20 ಲಕ್ಷ ರೂಪಾಯಿಗಳ ಚಿಲ್ಲರೆಯನ್ನು ಈ ಬಾಬಿಗೆ ಖರ್ಚು ಮಾಡುತ್ತಿದ್ದಾರೆ. ಈ ಲೆಕ್ಕದ ಪ್ರಕಾರ ನೋಡಿದರೆ ಸುಮಾರು 750 ಸಂಸ್ಥೆಗಳು ಸೆಕೆಂಡರಿ ಶಿಕ್ಷಣದಲ್ಲಿ ಕೆಲಸ ಮಾಡುತ್ತಿವೆಯೆಂದು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಸಾಮಾನ್ಯವಾಗಿ ಅದರಲ್ಲಿ ಸುಮಾರು ಶೇ. 50 ಭಾಗ ಖಾಸಗೀಸಂಸ್ಥೆಗಳು ಇರಬಹುದು. ಸರ್ಕಾರದ್ದು 120 ಅಷ್ಟು ಇವೆ. ಉಳಿದದ್ದು ಲೋಕಲ್ ಬಾಡೀಸಿಗೆ ಸಂಧಪಟ್ಟವು.

ಶ್ರೀ ಜಿ. ವೆಂಕಟೇಗೌಡ.—ಶೇ. 75 ರಷ್ಟು ರೆಕರಿಂಗ್ ಎಕ್ಸ್‌ಪೆಂಡಿಚರೇ ಆಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ಶೇ. 25 ರಷ್ಟು ತಮ್ಮ ಭಾಗವನ್ನು ಬೇರೆ ಕೊಡುತ್ತಾರೆ. ಎಲ್ಲೆಲ್ಲಿ ಸ್ವಲ್ಪ ಅನುಕೂಲಸ್ಥರು, ಬುದ್ಧಿವಂತರು ಇದ್ದಾರೆಯೋ ಅಲ್ಲಲ್ಲಿ ಖಾಸಗೀ ಸಂಸ್ಥೆಗಳು ಮುಂದೆ ಬಂದು ಹೈಸ್ಕೂಲುಗಳನ್ನು ತೆರೆಯುವುದರಿಂದಲೇ ತಮ್ಮ ತಮ್ಮ ಮಕ್ಕಳಿಗೆ ವಿಶೇಷವಾಗಿ ಅನುಕೂಲವಾಗುತ್ತದೆ. ಎಂಬ ಆಲೋಚನೆ ಅವರಿಗೆ ಇರುವಹಾಗೆ ನನಗೆ ತೋರುತ್ತದೆ. ಎಲ್ಲಿ ಸ್ವಲ್ಪ ಮಟ್ಟಿಗೆ ವೆಸ್ಟೆಡ್ ಇಂಟರೆಸ್ಟ್ ಇದೆಯೋ ಅಲ್ಲಿ ಅಷ್ಟು ಮೊತ್ತವನ್ನು ಕೂಡಿಸುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಎಲ್ಲಿ ಪ್ರಭಾವ ಶಾಲಿಗಳಿರುತ್ತಾರೋ...

ಶ್ರೀ ಡಿ. ದೇವರಾಜ್‌ಅರಸ್.—ನನ್ನ ಪ್ರಭಾವಶಾಲಿತ್ವ, ನಿಮ್ಮ ಪ್ರಭಾವಶಾಲಿತ್ವ ನಮಗೆನಮಗೇ ಗೊತ್ತಿದೆ.

3-00 P.M.

ಸ್ವಾಮಿ, ಎಷ್ಟೋ ಸಂಸ್ಥೆಗಳಲ್ಲಿ, ಉಪಾಧ್ಯಾಯರಿಗೆ 250 ರೂಪಾಯಿ ಸಂಬಳ ಎಂದು ತೋರಿಸಿ, 150 ರೂಪಾಯಿ ಕೊಟ್ಟು, 250 ರೂಪಾಯಿಗೆ ರುಜು ತೆಗೆದುಕೊಳ್ಳುತ್ತಾರೆ. ಈ ರೀತಿಯಾಗಿ ಖರ್ಚು ತೋರಿಸಿ ಎಷ್ಟೋ ಸಂಸ್ಥೆಗಳು ಗ್ರಾಂಟ್ ತೆಗೆದುಕೊಳ್ಳುತ್ತಿವೆ. ನಾನು ಮೊದಲೇ ಹೇಳಿದಹಾಗೆ, mal-distribution of institutions ನಡೆಯುತ್ತಾ ಇದೆ. you are not going to say ಇಂಥಿಂಥ ಡಿಸ್ಟ್ರಿಕ್ಟಿನಲ್ಲಿ, ಇಂಥಿಂಥ ತಾಲ್ಲೂಕಿನಲ್ಲಿ ಖಾಸಗಿಯಾಗಿ ಎಷ್ಟು ಮಾಡುವುದಕ್ಕೆ ಸಾಧ್ಯವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಖಾಸಗಿ ಜನಗಳು ಮುಂದೆ ಬಂದರೆ ಆಗುತ್ತದೆ. ಶೇಕಡ 25ರಷ್ಟು ಹಣ ಶೇಖರಿಸುವುದಕ್ಕೆ ಆಗುತ್ತಿಲ್ಲ. ನಾನ್-ರಿಕರಿಂಗ್ ಎಕ್ಸ್‌ಪೆಂಡಿಚರ್ ಕೊಡುವುದಕ್ಕೆ ಸಾಧ್ಯವಿಲ್ಲ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಎಲ್ಲಿ ಬುದ್ಧಿವಂತರೂ ವಿದ್ಯಾವಂತರೂ, ಹಣವಂತರೂ ಕೇಂದ್ರೀಕೃತವಾಗಿರುತ್ತಾರೋ ಅಂಥ ಕಡೆ ಮಾತ್ರ ಸಹಾಯವಾಗುತ್ತದೆ. ಎಲ್ಲಿ ಅವಿದ್ಯಾವಂಥರಿದ್ದಾರೋ, ಜನರಿಗೆ ಸಾಕಷ್ಟು ದುಡ್ಡನ್ನು ಕೊಡುವ ಅನುಕೂಲಗಳು ಇರುವುದಿಲ್ಲವೋ, ಅಂಥ ಕಡೆಗಳಲ್ಲಿ ಇದರಿಂದ ಖಂಡಿತ ಸಹಾಯವಾಗುವುದಿಲ್ಲ. ಇದು ಪುನಃ ಪರಿಶೀಲನೆ ಮಾಡಬೇಕಾದ ವಿಚಾರ 200 ಸಂಸ್ಥೆಗಳಲ್ಲಿ ಖಾಸಗಿಯಾಗಿ ತೆಗೆಯಬೇಕೆಂಬ ದೃಷ್ಟಿಯಿಂದ ನೋಡಿದರೆ, ಯಾವ ಕಮ್ಯೂನಿಟಿಯೇ ಇರಲಿ, ಅವಿದ್ಯಾವಂತರೂ ಬಡವರೂ ಆಗಿ ಹಿಂದುಳಿದ ಜನರಾಗಿದ್ದರೆ, ದುಡ್ಡು ಶೇಖರಿಸಲು ನಿಶ್ಯಕ್ತರಾಗಿರುವುದರಿಂದ ಇದರಿಂದ ಖಂಡಿತ ಸಹಾಯವಾಗುವುದಿಲ್ಲ. ಈ ನೀತಿ ಅವರ ಅನುಕೂಲಕ್ಕೆ ವಿರೋಧವಾಗಿ ಹೋಗುತ್ತದೆಂದು ನಾನು ತಿಳಿದುಕೊಂಡಿರುವುದರಿಂದ, ಇದನ್ನು ಪುನಃ ಪರಿಶೀಲನೆ ಮಾಡತಕ್ಕಂಥಾದ್ದು ತುಂಬ ಅಗತ್ಯ.

Sri N. RACHIAH.—The weaker sections have got more protection than what you call the vested interests.

ಶ್ರೀ ಡಿ. ದೇವರಾಜ್ ಅರಸ್.—ಇನ್ನು ಹಾಸ್ಟಲುಗಳ ಬಗ್ಗೆ ಇರುವ ಸರ್ಕಾರದ ನೀತಿ ನೋಡೋಣ. ಯಾವುದಾದರೂ ಸಾರ್ವಜನಿಕ ಹಾಸ್ಟಲ್, ಜನರಲ್ ಹಾಸ್ಟಲ್, ಜಾತ್ಯಾತೀತ ಹಾಸ್ಟಲ್ ತೆಗೆಯುತ್ತೇವೆಂದು ಹೇಳಿ, ಅವರವರ ಕೋಮಿನ ಹೆಸರಿಟ್ಟು, ಆ ಹೆಸರಿನ ಮುಂದೆ ಒಂದು ಜಾಗದಲ್ಲಿ ಸಾರ್ವಜನಿಕ ಹಾಸ್ಟಲ್ ಎಂಬ ಹೆಸರು ಕೊಡುವುದರಿಂದ, ಅದು ಹೇಗೆ ಸಾರ್ವಜನಿಕ ಹಾಸ್ಟಲ್ ಆಗುತ್ತದೆ. ಯಾವುದೇ ಒಂದು ಜಾತಿ ಮನಸ್ಸಿನಲ್ಲಿಟ್ಟುಕೊಂಡು ಹೇಳುತ್ತಿಲ್ಲ; ಎಲ್ಲಾ ಜಾತಿಯವರೂ ಹೀಗೆಯೇ ಹೇಳುತ್ತಿದ್ದಾರೆ. ಹೊರಗಡೆಯಿಂದ ಒಂದು ಜನರಲ್ ಹಾಸ್ಟಲ್ ಎಂಬ ಸೋಗನ್ನು ಹಾಕಿ, ದುಡ್ಡು ತೆಗೆದುಕೊಳ್ಳುತ್ತಾ ಇದ್ದಾರೆ. ಸರ್ಕಾರದವರು ಜಾತ್ಯಾತೀತ ರಾಷ್ಟ್ರವನ್ನು ಕಟ್ಟಬೇಕೆಂದು ಹೊರಟು, ಹೀಗೆ ಸಹಾಯ ಮಾಡಿದರೆ ನಾವು ಜಾತ್ಯಾತೀತ ರಾಷ್ಟ್ರಕ್ಕೆ ತಳಹದಿ ಹಾಕಿದ ಹಾಗಾಗುತ್ತದೆಯೇ ಎನ್ನುವುದನ್ನು ಯೋಚನೆ ಮಾಡಬೇಕು. ಈಗ ಮುಂದಿನ ಭಾರಿ ಜನಾಂಗ ಇದುವರೆಗೆ ಯಾವುದೋ ಒಂದು ರೀತಿಯಲ್ಲಿ, ಒಂದು ವಾತಾವರಣದಲ್ಲಿ ಬೆಳೆದು ಬಂದಿದ್ದು, ಅವರು ಕಲಿತಿರತಕ್ಕಂಥ ವಿದ್ಯೆ, ಬುದ್ಧಿ ಎಲ್ಲವನ್ನೂ ಸಂಪೂರ್ಣವಾಗಿ ಮರೆಯುವುದಕ್ಕೆ ಆಗುವುದಿಲ್ಲ. ಮುಂದಿನ ಜನಾಂಗದ ಈ ಒಂದು ಭಾವನೆ ಮಾರ್ಪಾಟಾಗಬೇಕಾದರೆ, ಎಲ್ಲಕ್ಕಿಂತ ಹೆಚ್ಚಾಗಿ, ವಿದ್ಯಾಸಂಸ್ಥೆಗಳಲ್ಲಿ, ಅದು ಯಾವ ಒಬ್ಬ ವ್ಯಕ್ತಿಯಿಂದಲೂ ಆಗುವುದಿಲ್ಲ; ಕ್ಲಾಸ್‌ರೂಮುಗಳಲ್ಲಿಯೂ ಆಗುವುದಿಲ್ಲ. ಹಾಸ್ಟಲುಗಳಲ್ಲಿ ಎಲ್ಲ ಜಾತಿಗಳವರ ಸಂಪರ್ಕವಿರುವುದರಿಂದ ಮಾತ್ರ ಒಂದು ಹೊಸ ಮನೋಭಾವವನ್ನು ನಮ್ಮ ವಿದ್ಯಾರ್ಥಿಗಳಲ್ಲಿ ಬೆಳೆಸಲು ಸಾಧ್ಯ. ಹಾಸ್ಟಲುಗಳ ವಿಷಯದಲ್ಲಿ ತಾವು ಇಷ್ಟು ಸುಲಭವಾದ ಅಥವ ಒಂದು ಉದಾಸೀನ ಮನೋಭಾವದಿಂದ ಕೋಟ್ಯಾಂತರ ರೂಪಾಯಿ ಖರ್ಚುಮಾಡುತ್ತಿದ್ದೀರಿ. ಆದರೆ ನೀವು ಖರ್ಚುಮಾಡುವ ದುಡ್ಡು ಸದ್ವಿನಿಯೋಗವಾಗಬೇಕಾದರೆ ನಾನು ಹೇಳಿದ ವಿಚಾರಗಳ ಕಡೆಗೆ ತೀವ್ರ ಗಮನ ಕೊಡಬೇಕು. ಅನೇಕ ಕಡೆ ಸಾರ್ವಜನಿಕ ಹಾಸ್ಟಲ್ ಎಂದು ಕರೆದುಬಿಟ್ಟು ಶೇಕಡ 80ರಷ್ಟು ತಮ್ಮ ಜನಗಳನ್ನು ಇಟ್ಟುಕೊಂಡು, ಇನ್ನು 15-20ರಷ್ಟನ್ನು ಬೇರೆ ಜಾತಿಯವರಿಗೆ ಕೊಡುತ್ತಾರೆ. ಅಷ್ಟೇ ಅಲ್ಲ, ಇನ್ನು ಕೆಲವು ಕಡೆ ಬರೀ ಲಿಖಿತದಲ್ಲಿ ಮಾತ್ರ ಇರುತ್ತದೆ, ಬೇರೆ ಜಾತಿಯವರು ಯಾರೂ ಇರುವುದಿಲ್ಲವೆಂದು ಹೇಳುತ್ತಾರೆ. ಸುಳ್ಳು ಲೆಕ್ಕ ಬರೆಯುತ್ತಾರೆ. ಹಿಂದುಳಿದ ಜನಾಂಗದವರಾದ ಹರಿಜನರಿದ್ದಾರೆ. ಅವರಿಗೆ ಊಟ ಹಾಕುವಾಗ ಒಟ್ಟಿಗೆ ಕೂರಿಸಿ ಹಾಕುವುದಿಲ್ಲ. ದೂರ ಕೂರಿಸಿ ಊಟ ಹಾಕುತ್ತಾರೆ. ಇಂಥ ಹಾಸ್ಟಲುಗಳನ್ನು ಸಾರ್ವಜನಿಕ ಹಾಸ್ಟಲು ಎಂದು ಕರೆಯುತ್ತಾರೆ. ಇದು ನ್ಯಾಯವೇ ? ಇದನ್ನು ಪರಿಶೀಲನೆ ಮಾಡಿದ್ದೀರ ? ಸರ್ಕಾರ ಈ ಹಾಸ್ಟಲುಗಳ ಆಡಳಿತವನ್ನು ಒಳ ಹೊಕ್ಕು ಪರಿಶೀಲನೆ ಮಾಡಬೇಕು. ಹಾಗೆ ಮಾಡದೆ, ಹೀಗೆಯೇ ಮುಂದುವರಿಸಿಕೊಂಡು ಬರುತ್ತೀರ ! ಮೈಸೂರಿನಲ್ಲಿ ನನಗೆ ಗೊತ್ತಿರುವ ಹಾಗೆ ಒಂದು ಸಾರ್ವಜನಿಕ ಹಾಸ್ಟಲ್ ಇದೆ. ಅದನ್ನು ನಡೆಸುತ್ತಿರುವವರ ಹೆಸರನ್ನು ಹೇಳಿದರೆ ತಪ್ಪೇನಾಗುವುದಿಲ್ಲ. I am going to name that gentleman ಶ್ರೀಮಾನ್ ಸುಬ್ಬಣ್ಣ ಅಂತ ಅವರ ಹೆಸರು. ಜಾತ್ಯಾತೀತ ಮನೋಭಾವ ಇರತಕ್ಕಂಥವರು ಮೈಸೂರು ದೇಶದಲ್ಲಿ ಇವತ್ತು ಯಾರಾದರೂ ಇದ್ದಾರೆಯೇ ಎಂದರೆ, ಈತ. ಈ ಮನುಷ್ಯ ಮೂರು ಕಡೆ ಹಾಸ್ಟಲುಗಳನ್ನು ನಡೆಸುತ್ತಾ ಇದ್ದಾರೆ. ಹಾಸ್ಟಲನ್ನು 1946ನೆ ಇಸವಿಯಿಂದ ಪ್ರಾರಂಭಿಸಿ, ಇದುವರೆಗೂ ಸರ್ಕಾರದ ಮುಂದೆ ಅರ್ಜಿಗಳನ್ನು ಸಹಾಯಕ್ಕಾಗಿ ಸಲ್ಲಿಸುತ್ತಿದ್ದರೂ, ಒಂದು ಕಾಸೂ ಅವರಿಗೆ ಕೊಟ್ಟಿಲ್ಲ. ಇನ್ನು ಬೇರೆಕಡೆಗಳಲ್ಲಿ ಕಳ್ಳಲೆಕ್ಕ ಇಟ್ಟುಕೊಂಡು, ಖರ್ಚುಮಾಡುತ್ತಿದ್ದಾರೆ; ಅವರಿಗೆ ಹಣ ಕೊಡುತ್ತೀರ. ತಂದೆತಾಯಿಗಳಿಲ್ಲವೆಂದು ಯಾರು ಸರ್ಟಿಫೈ ಮಾಡುತ್ತಾರೋ ಗೊತ್ತಿಲ್ಲ. ಅಂತೂ ಆರ್ಫನ್ಸ್ ಎಂಬ ಒಂದು ಲೆಕ್ಕ ಇಟ್ಟುಕೊಂಡರೆ, ಆ ಸಂಸ್ಥೆಗಳಿಗೆ ತಲೆ ಒಂದಕ್ಕೆ 3 ರೂಪಾಯೋ,

5 ರೂಪಾಯೋ ಕೊಟ್ಟು ಬಿಡುತ್ತೀರ. ಸರ್ಕಾರದವರು ಇಂಥ ಒಂದು ನೀತಿ ಇಟ್ಟು ಕೊಂಡಿದ್ದೀರ! ಒಂದೊಂದು ಕಡೆ 10-20-30 ಸಹಸ್ರ ರೂಪಾಯಿವರೆಗೆ ರಿಕರಿಂಗ್ ಎಕ್ಸ್‌ಪೆಂಡಿಚರ್ ಎಂದು ತೆಗೆದುಕೊಳ್ಳುತ್ತಿದ್ದಾರೆ. ಇದು ಯಾವುದೋ ಒಂದು ಇನ್‌ಫ್ಲೂಯನ್ಸ್ ಮೇಲೆ ನಡೆಯುತ್ತಾ ಇದೆ. ಹಾಸ್ಟಲ್ ನಡೆಸುವವರೂ, ಅಧಿಕಾರಿಗಳೂ ಒಂದು ಜಾತಿಯವರಾಗಿಬಿಟ್ಟರೆ, ಯಾವ ಇನ್‌ಫ್ಲೂಯನ್ಸೂ ಬೇಕಾಗಿಲ್ಲ. ಇಬ್ಬರೂ ಸೇರಿಕೊಂಡು ತಮಗೆ ಬೇಕು ಬೇಕಾದ ಹಾಗೆ ಸಹಾಯ ಹೊಂದುತ್ತಿರಬಹುದು. ಈ ನೀತಿಯನ್ನು ನೀವು ಪುನಃ ಪರಿಶೀಲನೆ ಮಾಡಿ ಬದ ಲಾಯಿಸಬೇಕು ಎಂದು ನಾನು ಹೇಳುತ್ತೇನೆ. ಯಾರಾದರೂ ಸಾರ್ವಜನಿಕ ಹಾಸ್ಟಲನ್ನು ತೆರೆಯುತ್ತೇವೆಂದು ಮುಂದೆ ಬಂದರೆ, ಬೇಡ ಅಂತ ಹೇಳಲು ನಾನು ಇಷ್ಟಪಡುವುದಿಲ್ಲ. ಆದರೆ ನೀವು ಅವರಿಗೆ ದುಡ್ಡು ಕೊಡಬೇಕಾದಾಗ, ನೀವು ಯಾವುದಾದರೂ ನಿಯಮವನ್ನು ಕಟ್ಟು ನಿಟ್ಟಾಗಿ ಅನುಸರಿಸಿ, ಅವು ಜಾತ್ಯಾತೀತ ಹಾಸ್ಟಲುಗಳೇ ಎಂದು ಪರೀಕ್ಷೆ ಮಾಡಬೇಕು. ಆ ಹಾಸ್ಟಲ್‌ನ ನೌಕರವರ್ಗದ, ಅಥವ ಅವರ ಜಾತಿಯ ಜನರು ಶೇಕಡ 25 ರಷ್ಟು ಇರಲಿ. ಹಾಗೆ ಯಾವುದಾದರೊಂದು ನಿಯಮವನ್ನು ಅನುಸರಿಸೋಣ. ಬಾಕಿ 75 ಭಾಗ ಬೇರೆ ಎಲ್ಲ ವರ್ಗದ ಜನರೂ ಬರುವುದಕ್ಕೆ ಅವಕಾಶವಿರಬೇಕು. ಆ ರೀತಿಯಾಗಿ ಈ ಸಂಸ್ಥೆಗಳು ನಡೆದುಕೊಂಡು ಹೋಗುತ್ತಿವೆಯೇ ಎಂದು ಸದಾ ಎಚ್ಚರಿಕೆಯಿಂದ ಸರ್ಕಾರ ನೋಡುತ್ತಿರಬೇಕು. ಸರ್ಕಾರ ದವರು ಈ ಹಾಸ್ಟಲುಗಳ ಮೇನೇಜ್‌ಮೆಂಟಿನಲ್ಲಿ ತಮ್ಮ ಒಬ್ಬ ಅಧಿಕಾರಿಯನ್ನಾಗಲಿ, ಅಥವ ಸರ್ಕಾರದ ಕಡೆಯಿಂದ ಬೇರೆ ಜನರನ್ನಾಗಲಿ ಇಟ್ಟು, ಆಗಿಂದಾಗ್ಗೆ ಅವುಗಳ ಆಡಳಿತವನ್ನು ಪರಿಶೀಲಿಸುತ್ತಿರಬೇಕು. ಈ ರೀತಿಯಾದ ಹೊಸ ನೀತಿಯನ್ನು ಹಾಕಿಕೊಳ್ಳಬೇಕು. ಬರೀ ಕಾಲೇಜುಗಳಲ್ಲಿ ಎಜುಕೇಷನ್ ಕೊಟ್ಟರೆ ಸಾಲದು, ಖಾಸಗೀ ಹಾಸ್ಟಲುಗಳೇ ಆಗಲಿ, ಸಾರ್ವ ಜನಿಕ ಹಾಸ್ಟಲುಗಳೇ ಆಗಲಿ, ಈಗಿರುವ ಹಾಗೆ, ಅವುಗಳಿಂದ ಏನೂ ಪ್ರಯೋಜನವಿಲ್ಲ. ನೇರ ವಾಗಿ ರೆಸಿಡೆನ್ಸಿಯಲ್ ಹಾಸ್ಟಲುಗಳನ್ನು ಮಾಡಿ, ಅವುಗಳಿಗೆ ಕಾಲೇಜಿಗೆ ಅಟ್ಯಾಚ್ ಆಗಿರ ಬೇಕು. ಬರೀ ಕಾಲೇಜುಗಳನ್ನು ತೆರೆಯುವುದಕ್ಕೆ, ಅವುಗಳಿಗೆ ದುಡ್ಡು ಖರ್ಚು ಮಾಡುವುದಕ್ಕೆ ಪ್ರಯತ್ನಗಳನ್ನು ಮಾಡುತ್ತೇವೆ. ಅಷ್ಟೇ ಸಾಲದು ಅದರ ಜೊತೆಗೆ ಹಾಸ್ಟಲುಗಳನ್ನು ತೆರೆಯಬೇಕು. Hostel is an essential part of the college. ಕಾಲೇಜು ಪಾಡಿಗೆ ಕಾಲೇಜು, ಹುಡುಗರ ಪಾಡಿಗೆ ಹುಡುಗರು ಆಗಿ, ಹುಡುಗರಲ್ಲಿ ಅಶಿಸ್ತು ಬೆಳೆದಮೇಲೆ, ನೀವು ಈಗಿನ ವಿದ್ಯಾರ್ಥಿಗಳಲ್ಲಿ ಅಶಿಸ್ತು ಜಾಸ್ತಿಯಾಗಿದೆ, ಅದೂ ಹೋಗಬೇಕೆಂದು ಭಾಷಣ ಮಾಡು ವುದಕ್ಕೆ ಹೋಗುತ್ತೇವೆ. ವಿದ್ಯಾರ್ಥಿಗಳಿಗೆ ಮೊದಲಿನಿಂದಲೂ ಶಿಸ್ತಿನ ತಳಹದಿ ಕೊಡಬೇಕು. ಅವರು 25 ಹೋಟೇಲುಗಳ ಮಸಾಲೆದೋಸೆ ತಿಂದಮೇಲೆ, ದೋಸೆ ಇನ್ನು ಮೇಲೆ ತಿನ್ನಬೇಡಿ ಎಂದು ಹೇಳಿದರೆ ಅವರು ಕಲಿತ ಅಭ್ಯಾಸ ಹೋಗುತ್ತದೆಯೇ ?

ಪ್ರೈಮರಿ ಎಜುಕೇಶನ್ನಿನ ಜವಾಬ್ದಾರಿ ತಾಲ್ಲೂಕು ಬೋರ್ಡಿಗೆ ವರ್ಗಾಯಿಸಿ ಬೋರ್ಡು ಗಳಿಗೆ ವರ್ಗಾಯಿಸಬೇಕೆ ಬೇಡವೇ ಎಂಬ ವಿಚಾರದಲ್ಲಿ ಬಹಳ ಚರ್ಚೆಯಾಗಿದೆ. ಮಾನ್ಯ ಮಂತ್ರಿ ಗಳೂ ಒಂದು ಕಡೆ ತಾಲ್ಲೂಕು ಬೋರ್ಡಿಗೆ ಅದನ್ನು ವಹಿಸಬೇಕೆಂದು ಯೋಚನೆ ಮಾಡುತ್ತಿ ದ್ದೇವೆಂದು ಹೇಳಿದಹಾಗೆ ಇದೆ. (of course it is subject to correction.) ಇದನ್ನು ಕೊಡುವುದು ಸರಿಯಲ್ಲ. ರಾಜ್ಯಾಂಗದ ಪ್ರಕಾರ, free and compulsory education ಕೊಡತಕ್ಕಂಥ ಜವಾಬ್ದಾರಿಯನ್ನು ನಾವು ಸರ್ಕಾರದವರು ಹೊತ್ತುಕೊಳ್ಳುತ್ತೇವೆಂದು ಹೇಳಿದ ಮೇಲೆ, ನೀವು ಅದನ್ನು ಖಾಸಗೀ ಸಂಸ್ಥೆಗಳಿಗಾಗಲಿ, ಲೋಕಲ್ ಬೋರ್ಡುಗಳಿಗಾಗಲಿ ಕೊಟ್ಟರೆ, ನಿಮ್ಮ ಜವಾಬ್ದಾರಿಯನ್ನು ಬೇರೆಯವರಿಗೆ ಕೊಟ್ಟಹಾಗಾಗುತ್ತದೆ.

ಸರ್ಕಾರದವರೀಗ ನಮ್ಮ ಮೂರನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಉಚಿತ ವಾ ತುತ್ತು ಒತ್ತಾಯ ಪ್ರಾಥಮಿಕ ಶಿಕ್ಷಣವನ್ನು ದೇಶದಲ್ಲಿರತಕ್ಕ ಮಕ್ಕಳಿಗೆಲ್ಲ ಕೊಡಲಾಗುತ್ತದೆಂದು ಹೇಳಿದ್ದಾರೆ. ದೇಶದಲ್ಲಿ ಸುಮಾರು ಆರನೇ ವಯಸ್ಸಿನಿಂದ ಹನ್ನೊಂದನೇ ವಯಸ್ಸಿನೊಳಗಿರತಕ್ಕ

(ಶ್ರೀ ಡಿ. ದೇವರಾಜ್ ಅರಸ್)

ಮಕ್ಕಳ ಸಂಖ್ಯೆ 40 ಲಕ್ಷ 'ಇರಬಹುದೆಂದು ಲೆಕ್ಕಹಾಕಬಹುದು. ಈಗ ಸರ್ಕಾರದವರು ಹೇಳಿರುವುದನ್ನೇ ಹೇಳುವುದಾದರೆ ಈ ಮೂರನೆ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸುಮಾರು 31 ಲಕ್ಷ ಮಕ್ಕಳಿಗೆ ಉಚಿತ ಹಾಗೂ ಒತ್ತಾಯ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕೊಡಬೇಕಾಗಿರುತ್ತೆಂದು ಹೇಳಿದ್ದಾರೆ. ಈ ಯೋಜನೆಗಾಗಿ ಈಗ ಹಾಲಿ ಇರತಕ್ಕ ಉಪಾಧ್ಯಾಯರ ಜೊತೆಗೆ ಇನ್ನೂ 19 ಸಾವಿರ ಉಪಾಧ್ಯಾಯರುಗಳು ಹೆಚ್ಚಿಗೆ ಈ ಮೂರನೇ ಪಂಚವಾರ್ಷಿಕ ಯೋಜನೇ ಅವಧಿಯಲ್ಲಿ ತೆಗೆದುಕೊಳ್ಳಬೇಕಾಗಿರುತ್ತೆಂದು ಸಹ ತಿಳಿಸಿದ್ದಾರೆ. ಇದಕ್ಕೆ ಏಳು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿರುತ್ತದೆಂದು ತಿಳಿಸಿದ್ದಾರೆ. ಆದರೆ ನಾವೂ ಮಕ್ಕಳಿಗೆ ವಿಧ್ಯಾಭ್ಯಾಸ ಕೊಟ್ಟೆವು ಅಂತ ಆದರೇನು ಪ್ರಯೋಜನ? ನಾವೂ ಕೊಡತಕ್ಕ ವಿದ್ಯಾ ಪ್ರಮಾಣ ಒಂದೇ ಪ್ರಾಮುಖ್ಯವಲ್ಲ. ಅದರ ಕ್ವಾಲಿಟಿ ಕೂಡ ಬಹಳ ಮುಖ್ಯವಾದದ್ದು. ಇದರ ಕಡೆಗೆ ಸರ್ಕಾರದವರು ಕೂಡಲೇ ಗಮನಕೊಡಬೇಕಾದ್ದು ಅತ್ಯಗತ್ಯ. ಆದರೆ ಸರ್ಕಾರದವರು ಈ ದಿವಸ ಹಾಕಿಕೊಂಡಿರುವ ಯೋಜನೆಯ ಪ್ರಕಾರ ಇಷ್ಟು ಮಕ್ಕಳಿಗೆ ಓದನ್ನು ಕಲಿಸಬೇಕು, ನಾವು ಇಷ್ಟು ಹಣವನ್ನು ಖರ್ಚು ಮಾಡಬೇಕು, ಇಷ್ಟು ಶಾಲೆಗಳನ್ನು ಕಟ್ಟಿಸಬೇಕು ಎನ್ನುವ ಸರ್ಕಾರದವರ ಈ ಒಂದು ನೀತಿಯೇನಿದೆ ಇದರ ಪ್ರಕಾರ ಸರ್ಕಾರದವರಿಗೆ ಈ ಮೂರನೇ ಪಂಚವಾರ್ಷಿಕ ಯೋಜನೆಯ ಅಂತ್ಯದೊಳಗಾಗಿ ಶೇಕಡ 90 ಮಕ್ಕಳಿಗಾದರೂ ಈ ಉಚಿತ ಮತ್ತು ಒತ್ತಾಯ ಶಿಕ್ಷಣವನ್ನು ಕೊಡಲು ಸಾಧ್ಯವೇ, ಇವರು ಗುರಿಮುಟ್ಟಲು ಸಾಧ್ಯವೇ ಎಂಬುದನ್ನು ಪರಿಶೀಲಿಸಬೇಕಾಗಿದೆ. ಈಗ ನಮಗೆ ಇರತಕ್ಕ ಸ್ಕೂಲುಗಳ ಜೊತೆಗೆ ಸರ್ಕಾರದವರು ಹೇಳಿರುವುದನ್ನೇ ನಾವು ಒಪ್ಪಿಕೊಂಡರೂ ನಮಗಿನ್ನೂ 2,800 ಶಾಲೆಗಳು ಬೇಕಾಗಿರುತ್ತೆ. ಈ ಶಾಲೆಗಳನ್ನು ಕಟ್ಟಲು ಸರ್ಕಾರದವರು ಒಂದೊಂದು ಶಾಲೆಗೂ ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಹೀಗೆ ಸರ್ಕಾರದವರು ಒಂದು ರೂಮಿಗೆ ಅಂದರೆ 20 ಅಡಿ × 15 ಅಡಿ ಅಳತೆಯ ಒಂದು ರೂಮನ್ನು ಕಟ್ಟಬೇಕಾದರೆ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟರೂ P.W.D. ಇಲಾಖೆಯ ಅಂದಾಜ ಮತ್ತು ಪ್ಲಾನ್ ಪ್ರಕಾರ ಮೂರು ಸಾವಿರ ರೂಪಾಯಿಗಳಿಲ್ಲದೆ ಈ ಕಟ್ಟಡ ಆಗುವುದಿಲ್ಲವೆಂಬುದಾಗಿ ತಿಳಿದು ಬಂದಿದೆ.

ಶ್ರೀ ಅಣ್ಣಾರಾವ್ ಗಣಮುಖಿ.—ಇಟ್ಟಿಗೆಯ ರೂಫಿಂಗ್ ಆದರೆ 2,800 ರೂಪಾಯಿಗಳಲ್ಲಿ ಆಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ಹಾಗಾದರೂ ಸರ್ಕಾರದವರು ಕೊಡತಕ್ಕದ್ದು ಒಂದು ಸಾವಿರ ಮಾತ್ರ. ಇನ್ನುಳಿಯತಕ್ಕ 1,800 ಅಥವಾ 2,000 ರೂಪಾಯಿಗಳನ್ನು ಯಾರು ಕೊಡಬೇಕು? ಆ ಹಳ್ಳಿಯ ಜನರೇ ಈ ಹಣವನ್ನು ಕೊಡಬೇಕೆಂಬ ಅಭಿಪ್ರಾಯ ಬರುತ್ತೆ. ಈಗ ನಾನು ಲೆಕ್ಕ ಹಾಕಿರುವ ಪ್ರಕಾರ ನಮ್ಮಲ್ಲಿರತಕ್ಕ ಶಾಲೆಗಳನ್ನು ಮತ್ತು ಈ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳನ್ನೂ ಗಣನೆಗೆ ತೆಗೆದುಕೊಂಡು ನೋಡಿದರೆ ಒಂದೊಂದು ಶಾಲೆಯಲ್ಲೂ ಒಂದು ನೂರು ಜನ ಮಕ್ಕಳು ಕುಳಿತುಕೊಳ್ಳುತ್ತಿದ್ದಾರೆಂತ ಗೊತ್ತಾಗುತ್ತದೆ. ಹೀಗೆ 20×15 ಚದರಡಿ ವಿಸ್ತೀರ್ಣದ ರೂಮಿನಲ್ಲಿ 100 ಹುಡುಗರಿರುವುದು ಎಂಥ ಸ್ಕೂಲು? ಇಷ್ಟು ಜಾಗದಲ್ಲಿ ಈ ದಿವಸ 100 ಮಕ್ಕಳು ಕುಳಿತು ಓದಬೇಕಾಗಿದೆ? ಈ ಜಾಗದಲ್ಲೆಲ್ಲಾ ಅಮ್ಮಮ್ಮಾ ಅಂದರೆ 30 ವಿದ್ಯಾರ್ಥಿಗಳು ಕುಳಿತುಕೊಳ್ಳಬಹುದು. ನನ್ನ ಲೆಕ್ಕದ ಪ್ರಕಾರ ಈ ಮೂರನೇ ಯೋಜನೇ ಅವಧಿಯಲ್ಲಿ ನಮಗೆ ಕನಿಷ್ಟ ಪಕ್ಷ 10 ಸಹಸ್ರ ಸ್ಕೂಲುಗಳಾದರೂ ಬೇಕೇ ಬೇಕೆಂದು ಕಾಣುತ್ತಿದೆ. ಆದರೆ ಈ 2,800 ರೂಪಾಯಿಗಳು ಒಂದು ಶಾಲೆಯನ್ನು ಕಟ್ಟಲು ಸಾಲುವುದಿಲ್ಲ. ಈ ವಿಚಾರವನ್ನು ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡಬೇಕು. ಆದರೆ ಸರ್ಕಾರದವರು ತಮ್ಮ ಆ ಒಂದು ಅರ್ಥಡಾಕ್ಸ್ ಪದ್ಧತಿ ಏನಿದೆ ಅದರ ಪ್ರಕಾರ ಈ

ಸ್ಕೂಲುಗಳನ್ನು ಕಟ್ಟಲು ಎಷ್ಟು ಏರಿಯಾ ಇರಬೇಕು ಎಷ್ಟು ಜನಗಳಿಗೆ ಆ ಜಾಗ ಆಗುತ್ತೆ. ಅದಕ್ಕೆ ಎಷ್ಟು ಇಟ್ಟಿಗೆ ಬೇಕಾಗುತ್ತೆ, ಕೂಲಿಗಳೆಷ್ಟು ಜನ ಬೇಕು, ಎಂಬುದನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡರೂ ಸರ್ಕಾರದವರ ಅಂದಾಜು ಹಿಂದುಮುಂದಾಗುತ್ತದೆ. ಆದಕಾರಣ ಈ ಪ್ರೈಮರಿ ಶಾಲೆಗಳನ್ನು ಕಟ್ಟುತಕ್ಕ ಕೆಲಸವನ್ನು ಆಯಾಯ ಗ್ರಾಮದ ಜನರಿಗೇ ಬಿಟ್ಟುಬಿಡುವುದು ಒಳ್ಳೆಯದು. ಆ ಗ್ರಾಮ ಪಂಚಾಯಿತಿಗೆ ಬಿಡಬಹುದಲ್ಲ? ಅವರು ಆ ಶಾಲೆಗಳನ್ನು ಮಣ್ಣಿನ ಗೋಡೆಯಲ್ಲಿ ಕಟ್ಟಲಿ ಅಥವಾ ಗಳುಗಳನ್ನೇ ಹಾಕಿ ಕಟ್ಟಲಿ ಅದು ಅವರ ಇಷ್ಟ. ಈ ದಿವಸ ನಾವು ನಮ್ಮ ಕಡೆ ವಾಸಮಾಡುತ್ತಿರುವ ಮನೆಗಳೆಲ್ಲ ಗಳುವಿನಲ್ಲಿ ಕಟ್ಟಿರತಕ್ಕ ಮನೆಗಳೇ ಬಹು ಕಾಲ ನಿಲ್ಲುತ್ತವೆ. ಅಪಾಯವೇನಿಲ್ಲ. ಆದ್ದರಿಂದ ಸರ್ಕಾರದವರು ಅವರಿಗೆ ಗಳುಗಳೊನ್ನದಗಿಸಿದರೆ ಸಾಕು. ನಮ್ಮ ಅರಣ್ಯಶಾಖೆಯ ಸಚಿವರು ಈ ಕಟ್ಟಡಗಳ ಬಗ್ಗೆ ಗಳುಗಳನ್ನು ಸರಬರಾಯಿ ಮಾಡತಕ್ಕ ಯೋಜನೆಯಿದೆಯೆಂದು ಹೇಳಿದ್ದಾರೆ. ಅವರು ಬಹುಶಃ ನಾಳೆ ಈ ಶಾಲೆಗಳಿಗೂ ಕೊಡಬಹುದೇನೋ? ಈ ದಿವಸ ಗಳುಗಳಲ್ಲಿ ಕಟ್ಟಿರತಕ್ಕ ಮನೆಗಳು ಶಾಶ್ವತವಾಗಿ ನಿಂತಿರುವಾಗ ಶಾಲೆಗಳನ್ನೇಕೆ ಗಳುಗಳಿಂದ ಕಟ್ಟಬಾರದು? ಇದನ್ನು ಸರ್ಕಾರದವರು ಪರಿಶೀಲಿಸಬೇಕೆಂದು ಹೇಳಿ ಈಗ ಸಭೆಯ ಮುಂದಿಟ್ಟಿರುವ ಡಿಮ್ಯಾಂಡುಗಳಿಗೆಲ್ಲ ನನ್ನ ಸಂಪೂರ್ಣ ಸಮರ್ಥನೆಯನ್ನಿತ್ತು ನನ್ನ ಭಾಷಣವನ್ನು ಮುಗಿಸುತ್ತೇನೆ.

Dr. R. NAGAN GOWDA.—Sir, I have given my name and I am standing often from yesterday to speak on the Demand. I have not spoken on the other Demands ; I want to speak on this.

Sri S. D. KOTHAWALE.—It would be better if the Government replies tomorrow. I have been requesting you since yesterday to give me a chance to speak on the Demand.

Mr. SPEAKER.—I have a list of 10 members and it would be impossible to give chance to all because the Demand has to be completed today and put to vote. I am told the Minister takes 2 hours and the Minister, for Forest half an hour and the finance Minister half an hour. Anyway, I leave it to the House. If it is the desire of the House that this should be continued and the replies should be given tomorrow, I will put it to the House. But, there will be a cut somewhere and we cannot avoid it. The total time cannot be extended even by a single hour. 14th is the last day and at the appointed hour, I will put the other Demands to the House. If members want, I will put it to the House and would like to know the sense of the House.

Sri G. VENKATAI GOWDA.—The Minister said he would require three hours.

Mr. SPEAKER.—Even if it is extended, Sri Venkatai Gowda would not get a chance. Will sit longer. For the last two days he has been atempting to get a chance and on the third day he will not get a chance.

(Sri NARASIMHE GOWDA.—*rose*)

Mr. SPEAKER.—I would not allow any one to speak. The Minister would reply.

ಈಗ ಮಂತ್ರಿಗಳು ಉತ್ತರ ಕೊಡುತ್ತಾರೆ.

† ಶ್ರೀ ಎಚ್. ಜಿ. ನರಸಿಂಹೇಗೌಡ.—ದಯವಿಟ್ಟು ನಾನು ಹೇಳುವುದನ್ನು ಕೇಳಬೇಕು ಹೀಗೆ ಸ್ಪೀಕರ್ ಅವರೇ ಮಾಡಿದ ರೂಲ್‌ಗೆ ವಿರೋಧವಾಗಿ ರೂಲಿಂಗ್ ಆಗುವುದಾದರೆ ಏನು ಮಾಡುವುದು ? ಸರಿ ಹಾಗಾದರೆ ನಿನ್ನೆಯ ದಿವಸವೇ ನಾವು closure motion ತಂದು ಬಿಡುತ್ತಿದ್ದೆವು ಹಾಗೆ ಮಾಡದೆ ನಿನ್ನೆಯ ದಿವಸ ನಾವು time extend ಮಾಡಬೇಕು ಎಂದು ಕೇಳಿಕೊಂಡೆವು ನನಗೆ ಮಾತನಾಡಲು ಚಾನ್ಸ್ ಕೊಡುತ್ತೇನೆಂದು ಹೇಳಿದರು. ಆದ್ದರಿಂದ ನನಗೆ ಇಂದು ಮಾತನಾಡಲು ಚಾನ್ಸ್ ಕೊಡಲೇಬೇಕು. ನಾನು ಮಾತನಾಡದೇ ಇರುವುದು ಸಾಧ್ಯವಿಲ್ಲ. ಈ ರೀತಿ ನೀವು ಮಾಡುವುದಾದರೆ ಪ್ರತಿದಿವಸ question hour ಆದ ಮೇಲೆ ಎಲ್ಲಾ ಡಿಮ್ಯಾಂಡುಗಳನ್ನು ಒಟಿಗೆ ಹಾಕಿ ಬಿಡಿ. ನಿಮಗೆ support ಸಿಕ್ಕೇ ಸಿಗುತ್ತದೆ. ಡಿಮ್ಯಾಂಡ್ ಪಾಸ್ ಆಗುತ್ತದೆ. ಹೀಗೆ ಆಗುವುದಾದರೆ ನಾವು ವಿರೋಧಿ ಪಕ್ಷದ ಸದಸ್ಯರು ಇಲ್ಲಿಗೆ ಏತಕ್ಕೆ ಬರಬೇಕು ನಿನ್ನೆಯ ದಿವಸ ನಮ್ಮ ಪಕ್ಷದ ಪರವಾಗಿ ಹೇಳಿ time extend ಮಾಡಬೇಕು, ಚರ್ಚೆ ಮುಂದುವರಿಸಬೇಕು, ಅನೇಕರು ಇನ್ನೂ ಮಾತನಾಡುವವರು ಇದ್ದಾರೆ ಎಂದು ಕೇಳಿಕೊಂಡುದ್ದಕ್ಕೆ ನಿನ್ನೆಯ ದಿವಸ ಡೆಪ್ಯುಟಿ ಸ್ಪೀಕರ್ ಅವರು ರೂಲಿಂಗ್ ಕೊಟ್ಟಿದ್ದಾರೆ. ಅದಕ್ಕೆ ಅನುಸಾರವಾಗಿ ಮಾಡಬೇಕು.

ಅಧ್ಯಕ್ಷರು.—ಅದು ಆಗುವುದಿಲ್ಲ.

ಶ್ರೀ ಎಚ್. ಜಿ. ನರಸಿಂಹೇಗೌಡ.—Important subject discussion ಮಾಡುವುದು ಕೊಡದೇ ಇದ್ದರೆ ಏನು ಪ್ರಯೋಜನ ? Without discussion ಆಗುವದಾದರೆ ಯಾವುದಕ್ಕೆ ಮಿನಿಸ್ಟರರು reply ಕೊಡುತಾರೆ ? ಅವರು ಉತ್ತರ ಹೇಳುವುದು ಏನಿದೆ ? ಅವರು ಹೇಳುವುದೆಲ್ಲಾ ಪುಸ್ತಕದಲ್ಲಿ ಇರುತ್ತದೆ.

Mr. SPEAKER.—He should carry the House with him. If that is so, I have no objection.

ಶ್ರೀ ಎಚ್. ಜಿ. ನರಸಿಂಹೇಗೌಡ.—ನಿಮಗೆ ನಾವು ಭಾಷಣ ಮಾಡಿ ಹೇಳುವುದು ಬೇಕಾಗಿಲ್ಲವಾದರೆ ಏತಕ್ಕೆ ಸಭೆಯಲ್ಲಿ ಮಂತ್ರಿಗಳು ಉತ್ತರ ಹೇಳಬೇಕಾಗುತ್ತದೆ ?

Mr. SPEAKER.—Things are going to a head. Unless my orders are obeyed in the House, I am going to adjourn the House.

ಶ್ರೀ ಎಚ್. ಜಿ. ನರಸಿಂಹೇಗೌಡ.—ದಯವಿಟ್ಟು ನಾನು ಹೇಳುವ ಮಾತನ್ನು ಕೇಳಿಕೊಳ್ಳಬೇಕು. ಕಾಂಗ್ರೆಸ್ ಪಕ್ಷದ ಸದಸ್ಯರೇ ಆಗಲಿ ವಿರೋಧಿ ಪಕ್ಷದ ಸದಸ್ಯರೇ ಆಗಲಿ ಇನ್ನೂ discuss ಮಾಡಬೇಕಾಗಿರುವದರಿಂದ ಕೊಂಚ ಕಾಲ extend ಮಾಡಬೇಕು.

Mr. SPEAKER.—No no, I am not going to extend the time because it is the sense of the House.

ಶ್ರೀ ಎಚ್. ಜಿ. ನರಸಿಂಹೇಗೌಡ.—ನಮಗೆ ಮಾತನಾಡುವುದಕ್ಕೆ ಚಾನ್ಸ್ ದೊರೆಯದೇ ಹೋದರೆ ನಾವು ಇಲ್ಲಿ ಏತಕ್ಕೆ ಬರುವುದು ? ಇದನ್ನು ಬಿಡಿ ಹೀಗೆ ಆದರೆ ಸರಿ! ಸರಿ! ಪರವಾ ಇಲ್ಲ. ಇನ್ನು ಮುಂದೆ ಪ್ರತಿಯೊಂದು subject ಮೇಲೆ closure motion move ಮಾಡುತ್ತೇವೆ ಇದೇನು ? ನಿಮ್ಮ ಮನಸ್ಸಿಗೆ ಬಂದ ಹಾಗೆ ನಿಮ್ಮ ಮನೆಯ ವ್ಯವಹಾರ ನಡೆಸುವ ಹಾಗೆ ಬೇಕಾದ ಹಾಗೆ ನೀವು ನಡೆಸುವುದಾದರೆ ನಾವು ಇಲ್ಲಿಗೆ ಬರುವುದು ಏತಕ್ಕೆ ? ಇಲ್ಲಿ ಇರುವುದು ಏತಕ್ಕೆ ? ನಾನು ಸಭೆಯಿಂದ ಹೊರಟು ಹೋಗುತ್ತೇನೆ.

(ಸದಸ್ಯರು ಸಭೆಯಿಂದ ಹೊರಗೆ ಹೋದರು)

Mr. SPEAKER.—He is not the only Member. I asked the Hon'ble Member to sit down. I would call on the Hon'ble Minister to reply.

(Sri NARASIMHE GOWDA *then with drew from the House.*)

Mr. SPEAKER.—He may go but he will not get a chance. I am not to be blamed. In this connection it is for the party to take care.

Sri J. H. SHAMSUDDIN (Deputy Minister for Finance).—Sir, I am thankful to the Members of the House who have made several constructive suggestions to improve the administration of the Sales Tax Department.

Mr. SPEAKER.—I would make a request to the concerned party the P.S.P. party to take care of the Member who behaved like this. I make an earnest request to them. Otherwise I will take serious notice of this. I do not want to take action now because it is not fair that I should jump into the fire at once. I do not want that I have given chances to all members. This has been sufficiently discussed though a particular member may not have got a chance. He is not the only Member of this House. There are also others. Sarvasri Kothawale and Hanumaiah and Nagan Gowda did not get a chance. He says that he has not taken part in any discussion. Is this the way he should quarrel with me ?

Sri J. H. SHAMSUDDIN.—Sir, I was just retering to the several constructive criticisms which have been advanced by several members of this House to improve the sales tax administration. All of them will be taken into consideration. Attempts will be made by Government to improve the department in a manner that it would yield maximum revenue to the exchequer. Before I reply to the individual criticisms I think it is better that I give a little insight into the working of the Department. Certain figures that I will furnish now will show the progress achieved by the Department.

Sri M. C. NARASIMHAN.—Why was not the annual administration report up to 1961 submitted to the House. Now you are taking the time of the House by giving an annual administration report, is it ?

Sri J. H. SHAMSUDDIN.—In 1957-58 in regard to Sales Tax, the demand was Rs. 36,09,319.22 nP. In 1958-59, it was Rs. 6,19,47,966 and odd. In 1959-60 the demand was Rs. 6,82,47,925. In 1960-61, upto January 1961, it was 5,87,58,000. I will now give the collection for the first and last year referred to above, because that would give an idea. In 1957-58 the collection was Rs. 2,60,20,429. In 1960-61, that is, upto January 1961, the figure is Rs. 5,51,04,866. The balance up-to-date is : 1958-59 it was 99 lakhs 88 thousand. Now it is 1 crore 36 lakhs 42 thousand 725.

The number of registered dealers will also indicate the number of people paying sales tax.

Sri J. B. MALLARADHYA.—The figures show that arrears have gone up.

Sri J. H. SHAMSUDDIN.—This is a carry-over of the old arrears I will explain the reasons later.

Now the registered dealers—I will give the total, instead of a break-up to save time—in 1958 was 53,030. In 1959-60, it was 58 thousand.

So far as assessment progress is concerned, in 1958 it was 40,881 in 1959-60 it was 46,000 and up to January 1961 it was 49 thousand. I will now give the total collection. In 1957-58, it was Rs. 2,60,20,429. In 1959-60 it was Rs. 4,68,00,000. In 1959-60 it was Rs. 5,12,16,096.

[MR. DEPUTY SPEAKER in the Chair.]

3-30 P.M.

The number of assessment pending—it is not necessary.

ಶ್ರೀ ಎಚ್. ಜಿ. ನರಸಿಂಹೇಗೌಡ.—Arrears ಎಷ್ಟಿದೆ ಮತ್ತು ವಸೂಲಿಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

Sri J. H. SHAMSUDDIN.—In the first list, the arrears are to the extent of Rs. 1,36,42,000. These arrears are due to one reason. So far as Bombay area is concerned, under the Bombay Act, the assessments were pending from 4 to 5 years. When the uniform law was applied to that area, the assessment and collection under the old Act assumed a large pendency. Therefore we appointed a Special Officer of the Deputy Commissioner's status to dispose of old pending cases under the Bombay Act. After creating that office we have been watching the progress and we have fixed time limit for the disposal of these cases. The accumulated arrears are being reduced from month to month and satisfactory progress has been recorded. The cases that were pending before opening the new office were 34,166. After creating a separate circle we have been able to dispose of 10,747 cases and still about 20,000 cases are pending. Upto the month of January the cases disposed of are 12,081.

Sri B. S. SHANKARAPPA.—In Tiptur and Arsikere you are not collecting purchase tax from the first purchaser in respect of copra and arecanut and so they have gone to the court and a stay order has been obtained.

Sri J. H. SHAMSUDDIN.—There are stay orders and the matter is *sub-judice*. The amount covered by stay orders is about Rs. 1,15,10,099. There are prosecutions in respect of 5,805 cases. The revenue recovered is about Rs. 10,10,000 ; the amount written off is Rs. 1 lakh ; the amount since collected Rs. 1,000 ; the amount due from Government departments Rs, 6 lakhs ; the amount due from unregistered dealers Rs. 700 ; amount due from co-operative societies Rs. 84,000. Action to be taken in cases amounting to Rs. 1,20,000. These are sum of the figures which will reveal how the department is being toned up and how action is being taken to see that maximum revenue is recovered from this important department.

Sri J. B. MALLARADHYA.—What is the percentage of recovery of previous year's arrears ?

Sri J. H. SHAMSUDDIN.—Roughly it works out to 26 to 68 per cent.

Sri J. B. MALLARADHYA.—The efficiency of the department is judged by the recovery of previous year's arrears.

Sri J. H. SHAMSUDDIN.—As I said earlier, one of the important causes was under the Bombay Act assessments were not completed. We had a legacy of integration which was quite large and that was the reason why we created a special machinery to clear up arrears and we hope that within a short time the arrears will be reduced.

Sri K. P. GADAG.—How many cases are pending under the Bombay Act ?

Sri J. H. SHAMSUDDIN.—About 2,300 cases.

There are two or three important points made by the Hon'ble Members. The Hon'ble Member Sri G. N. Puttanna said that no action was taken against a particular A.C.T.O. for declaring a particular turnover which was non–assessable. There is some petition against this particular case and the matter is being enquired by the Government. The Hon'ble Member also complained that the assessing officers sometimes harass the people on account of the discretionary power given to them to pronounce judgment on assessments. Of course power to give a decision is given to those officers under the Act, and an executive officer cannot interfere. But, Government have given them sufficient instructions. Whenever they pronounce judgments, they must give sufficient reasons for coming to a particular decision and they must also state as to how they have exercised their discretion in a particular manner to disbelieve the returns. The Government have instructed them to state all this so that an aggrieved party may have sufficient data to go to any court, if he so chooses, and prove that the judgment is erroneous. Beyond this nothing can be done by the executive because those officers are exercising judicial functions under the Act.

The Hon'ble Member referred to marginal cases. A watch is kept on the assessees because a business may sometimes increase or decrease. When there is increase of business by a particular assessee, naturally his case is taken away from the lower level to the higher level and the case is transferred from A.C.T.O. to C.T.O. We know that as business goes on increasing, if we have to realise the amount due to the increase, a watch should be kept on the turnover and the transactions of the assessees that are put under certain limit so that the enhanced amount may be available to the officer. Sometimes it may be that certain cases are omitted ; but strict action is taken. We are meeting the assessing officers every month so far as Bangalore is concerned and we are ironing out the difficulties of the department. We are trying to plug the loopholes.

Sri G. VENKATAI GOWDA.—There are instances where even if there is increasing business, the turnover is shown as less.

Sri J. H. SHAMSUDDIN.—If the member brings such instances to our notice, they will be looked into.

Then, it was said that the A.C.T.O. should be made subordinate to the C. T. O. For all administrative purposes, the A.C.T.O. is subordinate to the C.T.O. But so far as assessment is concerned, they are officers of independent jurisdiction and the A.C.T.O's work in that respect cannot be interfered with by the C.T.O. Therefore, there cannot be any grievance on that account.

Sri K. P. GADAG.—What is the maximum amount upto which an A.C.T.O. can assess ?

Sri J. H. SHAMSUDDIN.—Upto Rs. 40,000.

Sri K. P. GADAG.—I want to make a suggestion in this behalf that these cases may be revised by higher officers.

Sri J. H. SHAMSUDDIN.—According to the Act, the jurisdiction upto Rs. 40,000 is that of the A.C.T.O. and we cannot take out such cases from him unless the limit is exceeded.

Then, the Hon'ble Member Sri Gadag has made several suggestions. They will be examined. He has referred to evasion of tax by commission agents at the regulated markets in some places. Similar complaints came to the notice of Government and Government have taken steps to be a little more vigilant. A circular has been issued to all the Sales Tax Officers to be present when sales or auctions take place in the regulated markets. We are thinking whether we could not amend the law making it compulsory for every person dealing in regulated markets to apply for a licence and to get himself registered under the Sales Tax Act in order to prevent the abuses to which the Hon'ble Member has referred.

Then, he referred to the evasion of tax by the bullion dealers. Similar complaints came to the notice of Government that people brought gold here and sold it away without showing it in the accounts and have thus evaded tax. Special efforts were made to trace them. Even our C.I.Ds. were after them but it has not resulted in any detection. Still, the matter will receive the watchful consideration of Government.

Then, it was said that there are certain evasions in the rural areas where people do not keep proper accounts and that their transactions are not booked for assessment or registration. The assessing authorities and the Inspectors will be asked to be a little more vigilant in this matter.

Sri B. S. SHANKARAPPA.—What is the arrangement made to bring to book the middle class merchants who reside in the rural parts ? Are you taxing them ?

Sri J. H. SHAMSUDDIN.—We will book them. It is the duty of the purchaser in a regulated market to say that he has purchased from a particular person and that he is liable for assessment.

Sri J. B. MALLARADHYA.—What have you done to prevent duplicate accounting. That is a formidable thing which you have not been able to prevent.

Sri J. H. SHAMSUDDIN.—I will tell you what Government is contemplating to do about it. Right from the level of the A.C.T.Os. to the highest level, our Sales Tax Officers are maintaining constant touch with the merchant community. We have Inspecting Officers and we have an advisory committee which meets very aften and on which the representatives of merchants are given representation.

Sri K. P. GADAG.—Have any evasion cases been detected by these officers during the year 1960 ?

ಶ್ರೀ ಜಿ. ವೆಂಕಟೇ ಗೌಡ.—ತಾವು 200 ಖಾಸಗೀ ಹೈಸ್ಕೂಲುಗಳನ್ನು ತೆರೆಯಲು ಅವಕಾಶ ಕೊಡುತ್ತೇವೆಂದು ಹೇಳಿದ್ದೀರಲ್ಲ ಆ ವಿಚಾರದಲ್ಲಿ ಖಾಸಗೀ ಜನರನ್ನು ಮುಂದೆ ಬರುವಂತೆ ಆಕರ್ಷಣೆ ಮಾಡಲು ಸರ್ಕಾರದವರೇನು ಕ್ರಮ ಕೈಗೊಂಡಿದ್ದಾರೆ ?

ಶ್ರೀ ಅಣ್ಣಾರಾವ್ ಗುಣಮುಖಿ.—ಈಗ ನಮ್ಮ ಪ್ರಸಕ್ತ ಯೋಜನೆಯಲ್ಲಿ ಪ್ರೊವಿಜನಲ್ ಆಗಿ 200 ಖಾಸಗೀ ಹೈಸ್ಕೂಲುಗಳ ಸ್ಥಾಪನೇ ಬಗ್ಗೆ ಹಣವನ್ನು ಪ್ರೊವೈಡ್ ಮಾಡಿದ್ದೇವೆ. ಆದರೆ. ಈ ಯೋಜನೆಗೂ ನಾವು ನಾರ್ಮಲ್ ಅಗಿ ಕೊಡತಕ್ಕ ಗ್ರಾಂಟ್ ಹಣಕ್ಕೂ ಏನೂ ಸಂಬಂಧವಿಲ್ಲ ನಾರ್ಮಲ್ ಆಗಿ ಕೊಡೋ ಹಣವೇ ಬೇರೆ ಇದೆ. ಡೆವಲಪ್‌ಮೆಂಟಿನ ಬಗ್ಗೆ ಕೊಡುವ ಹಣವೇ ಬೇರೆಯಿದೆ ಜನರು ನಾಳೆ ಕೆಲವು ಕಡೆ ಹೆಚ್ಚು ಸ್ಕೂಲುಗಳನ್ನು ತೆರೆದಿದ್ದಾರೆ, ಇನ್ನು ಕೆಲವು ಕಡೆ ಕಡಿಮೆ ಸ್ಕೂಲುಗಳನ್ನು ತೆರೆದಿದ್ದಾರ ಎಂದು ನಾಳೆ ತಾವುಗಳೇ ಟೀಕೆ ಮಾಡುತ್ತೀರಿ. ಆದುದರಿಂದ ನಾವೀಗ ಈ ಹೊಸದಾಗಿ ಸ್ಥಾಪನೆ ಮಾಡತಕ್ಕ ಸ್ಕೂಲುಗಳನ್ನು ಎಲ್ಲಿಗೆ ಕೊಡಬಹುದು ಎಂಬ ವಿಚಾರದಲ್ಲಿ ಒಂದು ಸರ್ವೆ ನಡೆಸುತ್ತಿದ್ದೇವೆ. 7 ಆಥವಾ 8 ಮೈಲಿಗಳು ಪ್ರದೇಶವನ್ನು ಒಂದು ಯೂನಿಟ್ಟಾಗಿಟ್ಟುಕೊಂಡು ಆ ಪ್ರದೇಶದಲ್ಲಿ ಯಾವ ಜಾಗದಲ್ಲಿ ಈ ಹೈಸ್ಕೂಲುಗಳನ್ನು ಕಟ್ಟಬೇಕೆಂಬ ವಿಚಾರದದಲ್ಲಿ ಈಗಾಗಲೇ ತೀರ್ಮಾನಕ್ಕೆ ಬರಲಾಗಿದೆ ಆದರೆ ಈ ಸರ್ವೇಲಿ ಅಂಥ ತಪ್ಪುಗಳೇನಾದರೂ ಆಗಿರುತ್ತೆಂದು ತಿಳಿಸಿದರೆ ಅದನ್ನು ಬೇಕಾದರೆ ಸರ್ಕಾರದವರು ಮತ್ತೆ ಪರಿಶೀಲನೆ ಮಾಡುತ್ತಾರೆ. ಸರ್ಕಾರದವರಾದರೂ ಇಂಥ ಒಂದು ಸ್ಥಳಕ್ಕೆ ಶಾಲೆ ಅಗತ್ಯ ಇದೆಯೇ ಇಲ್ಲವೇ ಎಂಬುದನ್ನೆಲ್ಲಾ ನೋಡಿ ಕೊಂಡೇ ಮಾಡುತ್ತಾರೆ. ಹೀಗೆ ಒಂದು ಲೆಕ್ಕಾಚಾರವಿಲ್ಲದೆ ಕೆಲಸ ಮಾಡಿ ಬಿಟ್ಟರೆ ನಾಳೆ ಸರ್ಕಾರದವರೇ ಹೆಚ್ಚು ಗ್ರಾಂಟನ್ನು ಕೊಡಬೇಕಾಗಿ ಬರುತ್ತದೆ ಇನ್ನು ಕೆಲವರು ಈ ಪ್ರೀ ಪ್ರೈಮರಿ ವಿಧ್ಯಾಭ್ಯಾಸವ ವಿಚಾರದಲ್ಲಿ ಸರ್ಕಾರವರು ಅಲಕ್ಷ್ಯಮಾಡಿದ್ದಾ

(ಶ್ರೀ ಅಣ್ಣಾರಾವ್ ಗಣಮುಖಿ)

ರೆಂದು ಹೇಳಿದರು ಈ ಫ್ರೀ ಪ್ರೈಮರಿ ವಿದ್ಯಾಭ್ಯಾಸವನ್ನು ಕಂಪಲ್‌ಸರಿಯಾಗಿ ಕೊಡಲೇ ಬೇಕೆಂದು ಎಲ್ಲಿಯೂ ಹೇಳಿಲ್ಲ. ಈ ವಿಚಾರದಲ್ಲಿ ಶ್ರೀ ವರ್ಮಾ ಜೆ. ಬಿ. ಮಲ್ಲಾರಾಧ್ಯರ ಒಂದು ವರದಿಯೇ ಇರುತ್ತೆ ಈ ಬಾಬಿಗೆಷ್ಟು ಹಣವನ್ನು ತೆಗೆಯಿಡಬೇಕೋ ಅಷ್ಟನ್ನು ಮಾತ್ರ ನಾವೀಗ ತೆಗೆದಿಟ್ಟಿದ್ದೇವೆ. ಈ ವಿಚಾರದಲ್ಲಿ ಸರ್ಕಾರದವರೇನಿದ್ದರೂ ಲಿಬರಲ್ ಆಗಿ ಗ್ರ್ಯಾಂಟನ್ನು ಮಾತ್ರ ಕೊಡುತ್ತಾರೆ ಅದಕ್ಕೆ ಈಗ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿದ್ದೇವೆ. ಆದರೆ ಈ ಫ್ರೀ ಪ್ರೈಮರಿ ಶಾಲೆಗಳನ್ನು ಸರ್ಕಾರದವರೇ ಪ್ರಾರಂಭಿಸಬೇಕೆಂದರೆ ಅದು ಬಹು ಕಷ್ಟ. ಈ ಬಾಬಿಗೆ ನಮ್ಮಲ್ಲೀಗ ಸಾಕಷ್ಟು ತರಪೇತು ಪಡೆದ ಉಪಾಧ್ಯಾಯರಿಲ್ಲ, ಇಂಥ ನುರಿತ ಉಪಾಧ್ಯಾಯರು ಈಗ ಸಿಗುವುದು ಬಹಳ ಕಷ್ಟ. ಈ ತೊಂದರೆಯನ್ನು ನಿವಾರಣೆ ಮಾಡುವುದಕ್ಕೋಸ್ಕರವಾಗಿ ನಾವೀಗ ನಮ್ಮ ಟ್ರೈನಿಂಗ್ ಕಾಲೇಜುಗಳಲ್ಲೇ ಎರಡು ಟ್ರೈನಿಂಗ್ ಸೆಂಟರುಗಳನ್ನು ತೆರೆಯಬೇಕೆಂದಿದ್ದೇವೆ ಶ್ರೀ ವರ್ಮಾ ಮಲ್ಲಾರಾಧ್ಯರ ರಿಪೋರ್ಟಿನಲ್ಲಿ ಈ ಪ್ರೀ-ಪ್ರೈಮರಿ ಶಾಲೆಗೆ ಸಹಿತ S.S.L.C. ಆದ ಟೀಚರ್ಸ್‌ಗಳೇ ಇರಬೇಕೆಂತ ಶಿಫಾರಸು ಮಾಡಲಾಗಿದೆ ಆದರೆ ಈ ಫ್ರಿ-ಪ್ರೈಮರಿ ಶಾಲೆಗಳಲ್ಲಿ ಕೆಲವು ಕಡೆ ಎಲ್ಲಾ ಮಕ್ಕಳಿಗೂ ಶಿಕ್ಷಣ ದೊರೆಯುವುದು ದುರ್ಲಭವೆಂದು ಅವರು ಬಹಳ ಹೈ ಛಾರ್ಜಸ್ ಮಾಡುತ್ತಿದ್ದಾರೆ ದು, ಅಲ್ಲಿ ಬಡವರ ಮಕ್ಕಳಿಗೆ ಅನುಕೂಲವೇನು ದೊರೆಯುತ್ತಿಲ್ಲವೆಂಬ ಪುಕಾರು ಬೇರೆ ಒಂದಿದೆ. ಆದರೆ ಇಂಥ ಶಾಲೆಗಳಿಗೆ ಸರ್ಕಾರದವರು ಕೇವಲ ಒಂದು ರೆಕಾಗ್ನಿಷನ್ ಮಾತ್ರ ಕೊಟ್ಟಿದ್ದಾರೇ ಹೊರತು ಇಂಥ ಶಾಲೆಗಳಿಗೆ ಸರ್ಕಾರದವರು ಗ್ರ್ಯಾಂಟನ್ನೇನೂ ಕೊಡುತ್ತಿಲ್ಲ. ಇಂಥ ಕೆಲವು ಶಾಲೆಗಳೀಗ ಹೀಗೆ ಫೀಜನ್ನು ಕೊಡಲು ಯಾರಿಗೆ ಶಕ್ತಿಯಿದೆಯೋ ಅಂಥವರಿಂದ ಹಣವನ್ನೂನೂಲು ಮಾಡಿಕೊಂಡು ಆ ಶಾಲೆಗಳನ್ನು ನಡೆಸುತ್ತಿದ್ದಾರೆ. ಅಷ್ಟೇ ವಿನಾ ಇಂಥ ಶಾಲೆಗಳಿಗೆ ಸರ್ಕಾರ ಗ್ರ್ಯಾಂಟನ್ನೇನೂ ಕೊಡುತ್ತಿಲ್ಲ. ಇನ್ನು ಸುಬ್ಬಯ್ಯನಾಯಕ್ ಅವರು ಮೈಸೂರು ಯೂನಿವರ್ಸಿಟಿಗಳ ಬಗ್ಗೆ ಒಂದು ಯೂನಿ ಫಾರ್ಮಿಟಿ ಇರಬೇಕೆಂದು ಹೇಳಿ ದ್ದಾರೆ. ಈಗಾಗಲೇ ಕರ್ಣಾಟಕ ಯೂನಿವರ್ಸಿಟಿಗೆ ಸೇರಿರತಕ್ಕ ಎಷ್ಟು ಕಾಲೇಜುಗಳಿವೆಯೋ ಅಷ್ಟ ರಲ್ಲೂ ಒಂದು ಯೂನಿ ಫಾರ್ಮಿಟಿ ಇದ್ದೇ ಇರುತ್ತೆ. ಇಲ್ಲಿಯೂ ಈಗ ಫೀಜನ್ನು ಹೆಚ್ಚಿಸಲಾಗಿದೆ. ಇನ್ನು ಹಳೇ ಮೈಸೂರಿನ ವಿಚಾರಕ್ಕೆ ಬಂದರೆ ಇಲ್ಲಿ ಕಾಲೇಜುಗಳಲ್ಲಿ ಫೀಜು ಕಡಿಮೆ ಇದೆ ಆದರೆ ಕುರ್ಗ್ ಮತ್ತ ಮಂಗಳೂರುಗಳ ಈ ಕಾಲೇಜ್ ಫೀಜ್ ಜಾಸ್ತಿ ಇರುತ್ತೆ ಈ ಕಾಲೇಜುಗಳ ಫೀಜನ್ನು ಮೈಸೂರು ಕಾಲೇಜುಗಳ ಫೀಜಿಗೆ ಸರಿಯಾಗಿ ರೆಡ್ಯೂಸಿ ಮಾಡಬೇಕು ಇಲ್ಲವೇ ಹಳೇ ಮೈಸೂರಿನಲ್ಲಿರತಕ್ಕ ಕಾಲೇಜುಗಳ ಫೀಜುಯನ್ನು ಹೆಚ್ಚಿಸಬೇಕು. ಇದನ್ನು ಸರ್ಕಾರದವರು ಈಗಾಗಲೇ ಪರಿಶೀಲನೆ ಮಾಡುತಿದ್ದಾರೆ. ಈ ಬಿ. ಇ. ಡಿ. ಕಾಲೇಜುಗಳಲ್ಲಿ ಅಭ್ಯಾಸಮಾಡ ತಕ್ಕವರಿಗೆ ಸಾಲರಿ ಮತ್ತು ಸ್ಟೈಪೆಂಡ್‌ರಿಗಳನ್ನು ಕೊಡುತ್ತಿಲ್ಲವೆಂದು ಶ್ರೀ ಸುಬ್ಬಯ್ಯನಾಯಕ ಹೇಳಿದರು ಆದರೆ ಅವರು ಹೇಳಿದ್ದು ಸರಿಯಲ್ಲ. ಸರ್ಕಾರದವರು ಹಾಲಿ ಈ ಕೋರ್ಸಿನಲ್ಲಿರತಕ್ಕವರಿಗೆ ಅವರು ಗವರ್ನ್ಮೆಂಟ್ ನೌಕರರಾಗಿದ್ದರೆ ಅವರಿಗೆ ಸಾಲರಿ ಮತ್ತು ಫ್ಯಾಮಿಲಿ ಸ್ಟೈಫೆಂಡರಿ ಗಳನ್ನೆಲ್ಲಾ ಕೊಡಲಾಗುತ್ತಿದೆ. ಆದರೆ ಈ ಟ್ರೈನಿಂಗಿಗೆ ಖಾಸಗಿ ಜನರು ಬಂದಿದ್ದರೆ ಅಂಥವರಿಗೆ ಸರ್ಕಾರದವರು ಇವುಗಳನ್ನು ಕೊಡುವುದಿಲ್ಲ.

ಇನ್ನು ಕೆಲವರು ಕನ್ನಡ ಟೈಪರೈಟರಿನ ವಿಚಾರ ಪ್ರಸ್ತಾಪ ಮಾಡಿದ್ದಾರೆ. ನಾವು ಈಗಾಗಲೇ ಅನಂತ ಸುಬ್ಬರಾಯರ ಆರು ಟೈಪರೈಟರುಗಳಿಗೆ ಮದ್ರಾಸ್‌ನಲ್ಲಿ ಆರ್ಡರ್ ಕೊಟ್ಟಿದ್ದೇವೆ. ಅವರು ಅವುಗಳನ್ನು ಕಳೆದ ಫೆಬ್ರುವರಿಯಲ್ಲೇ ನಮಗೆ ಕೊಡಬೇಕಾಗಿತ್ತು ಆದರೆ ಆ ಆರು ಕನ್ನಡ ಟೈಪರೈಟರುಗಳನ್ನೂ ಬಂದಿಲ್ಲ. ಆ ಮೆಷೀನ್‌ಗಳು ಇಲ್ಲಿಗೆ ಬಂದು ಅವು ಸಕ್‌ಸಸ್‌ಫುಲ್ ಆಗಿ ಕೆಲಸ ಮಾಡಿದರೆ ಮತ್ತೆ ಒಂದು ನೂರು ಕನ್ನಡ ಟೈಪ್‌ರೈಟರುಗಳಿಗೆ ಆರ್ಡರ್ ಕೊಡಬೇಕೆಂದಿದ್ದೆವೆ ಆದರೆ ಈಗ ನಮ್ಮ ಆಫೀಸಿನಲ್ಲಿ ಇರತಕ್ಕ ಟೈಪ್‌ರೈಟರ್ ಅದು ಇಲ್ಲೇ ನಮ್ಮ ಗೌರ್ನಮೆಂಟ್ ಪ್ರೆಸ್ಸಿನಲ್ಲಿ ತಯಾರಾದದ್ದು. ಆದರೆ ನಾವೀಗ ಆರ್ಡರ್ ಕೊಟ್ಟಿರತಕ್ಕವುಗಳು

ಜರ್ಮನಿಯಿಂದ ತಯಾರಾಗಿ ಬರುತ್ತವೆ. ಅವುಗಳಿಗೂ ಈಗ ನಮ್ಮಲ್ಲಿರುವುದಕ್ಕೂ ಬಹಳ ವ್ಯತ್ಯಾಸ ಇದೆ.

ಶ್ರೀ ಎಸ್. ರಾಮಪ್ಪ.—ಈಗ ತಮ್ಮ ಆಫೀಸಿನಲ್ಲಿರತಕ್ಕ ಮೆಷಿನ್ ಸರಿಯಾಗಿ ಕೆಲಸ ಮಾಡುತ್ತಿದೆಯೆಂದು ಹೇಳುತ್ತಿದ್ದಾರೆ. ಅದು ನಿಜವೇ ?

ಶ್ರೀ ಅಣ್ಣಾರಾವ್ ಗುಣಮುಖಿ.—ಅದರೇನು ಇನ್ನೂ ಸ್ಪೀಡ್ ಸರಿಯಾಗಿ ಬಂದಿಲ್ಲ. ಈಗ ಮದ್ರಾಸಿನಿಂದ ಬರತಕ್ಕ ಮೆಷಿನ್‌ಗಳೇನಿವೆ ಅವುಗಳನ್ನು ಟ್ರೈ ಮಾಡಿ ನೋಡ ಬೇಕಾಗಿರುತ್ತೆ. ಈಗ ನಾವು ಸುಬ್ಬರಾಯರಿಗೆ ೩ ಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೇವೆ. ಇನ್ನುಳಿದ 2 ಸಾವಿರ ರೂಪಾಯಿಗಳನ್ನು ಎಕ್ಸ್‌ಪೆರಿಮೆಂಟ್ ಮಾಡಿ ನೋಡಿದ ಮೇಲೆ ಕೊಡಲಾಗುತ್ತದೆ ಎಂತ ಹೇಳಿದ್ದೇವೆ.

ಶ್ರೀ ಎಸ್. ಶರಣಗೌಡ.—ಮೂರು ತಿಂಗಳು ವಾಯಿದೆ ಗತಿಸಿದಾಗ್ಯೂ ಇನ್ನೂ ೩ ಆರೂ ಟೈಪ್‌ರೈಟರಗಳು ಬಂದಿಲ್ಲವೆಂದು ಸಚಿವರು ಹೇಳುತ್ತಿದ್ದಾರೆ. ಅವುಗಳನ್ನು ಬೇಗ ತರಿಸಿಕೊಳ್ಳಲು ಏನು ಕ್ರಮ ಕೈಗೊಂಡಿದ್ದಾರೆ ? ಇವುಗಳನ್ನೇನು ಟೆಂಡರ್ ಕರೆದು ಕೊಟ್ಟಿದ್ದಾರೋ ಹೇಗೆ ?

ಶ್ರೀ ಅಣ್ಣಾರಾವ್ ಗುಣಮುಖಿ.—ಟೆಂಡರುಗಳನ್ನು ಕರದು ಪರೀಶಿಲನೆ ಮಾಡಿ ಅದರಲ್ಲಿ ಯಾವುದು ಲೋಯೆಸ್ಟ್ ಇತ್ತೋ ಅಂಥ ಟೆಂಡರನ್ನೇ ಅಕ್‌ಸೆಪ್ಟ್ ಮಾಡಿದ್ದೇವೆ.

ಡಾ. ಬಿ. ಕೆ. ನಾಗೂರ್.—ಇಲ್ಲಿ ದುಡ್ಡಿನ ಪ್ರಶ್ನೆ ಮುಖ್ಯವಲ್ಲ. ಸಲ್ಪ ದುಡ್ಡು ಹೆಚ್ಚಾದರೂ ಬಂತೆಯಿಲ್ಲ. ಮಾಲು ಚಲೋ ಇರಬೇಕು.

ಶ್ರೀ ಅಣ್ಣಾರಾವ್ ಗುಣಮುಖಿ.—ಸರ್ಕಾರ ಹೇಗೆ ಮಾಡಿದರೂ ಕಷ್ಟ. ಕಡಿಮೆ ಟೆಂಡರಿಗೆ ಕೊಟ್ಟರೆ-ಜಾಸ್ತಿ ಟೆಂಡರಿಗೆ ಕೊಟ್ಟಿದ್ದರೆ ಚೆನ್ನಾಗಿತ್ತು ಅಂತೀರಿ. ಜಾಸ್ತಿ ಟಂಡರಿಗೇನಾದರೂ ಒಪ್ಪಿಕೊಂಡಿದ್ದಾರೆ ಅಗ ಕಡಿಮೆ ಟೆಂಡರಿಗೆ ಕೊಡಲಿಲ್ಲ ಎಂತ ಟೀಕೆ ಮಾಡುತ್ತೀರಿ. ಆದರೆ ನಾವು ಈಗ ಇದನ್ನಿನ್ನೂ ಎಕ್ಸ್‌ಪರಿಮೆಂಟ್ ಸ್ಟೇಜನಲ್ಲೇ ಇಟ್ಟಿದ್ದೇವೆ. ಅನಂತ ಸುಬ್ಬರಾಯರು ತಮ್ಮ ಕೀ ಬೋರ್ಡಿನಲ್ಲಿ ಎಲ್ಲವೂ ಮುಗಿಯ ಬೇಕೆಂದು ಹೇಳುತ್ತಿದ್ದಾರೆ. ಅದರೆ ಸರ್ಕಾರದವರು ಇನ್ನೂ ಉತ್ತಮವಾದ ಕೀ ಬೋರ್ಡು ಬಂದಿರೆ ಅದಕ್ಕೆ ಒಂದು ಅವಕಾಶವಿರುವಂತೆ ಮಾಡಿದ್ದೇವೆ. ಸರ್ಕಾರ ಈ ಆಲೋಚನೆಯನ್ನೇನೂ ಕೈ ಬಿಟ್ಟಿಲ್ಲ. ನಾವೂ ಅನೇಕ ವಿಚಾರ ಗಳನ್ನು ಪರಶೀಲನೆ ಮಾಡುತ್ತಿದ್ದೇವೆ. ಟೈಪರೈಟರುಗಳಿಗೆಲ್ಲಾ ಮಾನೋಟೈಪ್-ಲನೋ ಟೈಪುಗಳು ಚೆನ್ನಾಗಿರಬೇಕು ಅವುಗಳ ವಿಚಾರದಲ್ಲಿ ಸರ್ಕಾರ ಹೆಚ್ಚಿನ ನಿಗಾ ಕೊಟ್ಟಿದೆ ಅದಕ್ಕೆಲ್ಲ ಅದಕ್ಕೆ ಸರಿಯಾದ ವ್ಯವಸ್ಥೆ ಮಾಡಿದ್ದೇವೆ. ಸರ್ಕಾರ ಒಂದು ರೈಲಿನ ಮೇಲೆ ಶಿಸ್ತಿನಿಂದ ನಡೆಯುತ್ತಿದೆ. ಆದರೆ ಆ ರೈಲು ಕಂಬಿ ತಪ್ಪಿ ತೆಂದರೆ ಈ ಆಡಳಿತ ಗಾಡಿ ಬಿದ್ದು ಹೋಗುತ್ತದೆ

5-00 P.M.

ಎಂಜಿನ್ನು ರೈಲು ಬಿಟ್ಟು ಕೆಳಗೆ ಬಿದ್ದು ಹೋದರೆ ಅದು ಮುಂದಕ್ಕೆ ಹೋಗುವದಿಲ್ಲ. ರೈಲ ಮೇಲೆ ಸರಿಯಾಗಿ ಹೋಗಬೇಕಾಗಿದೆ. ಇದಕ್ಕಾಗಿ ಸ್ಕ್ರಿಪ್ಟ್ ರೀಫಾರ್ಮ್ ಮಾಡಿ ಕೆಲಸ ಮುಂದುವರಿಸಬೇಕೆಂದು ಮಾಡಿದ್ದೇವೆ. ಈ ವಿಚಾರದಲ್ಲಿ ತೀವ್ರಕ್ರಮ ತೆಗೆದುಕೊಳ್ಳುತ್ತೇವೆ ಎಂದು ಇಷ್ಟು ಮಾತ್ರ ಹೇಳುತ್ತೇನೆ. ನೂರು ಕನ್ನಡ ಟೈಪರೈಟರುಗಳನ್ನು ತರಿಸುತ್ತೇವೆ. ಇದಕ್ಕೆ ಆರ್ಡರ್ ಕೊಟ್ಟಿದೆ. ಈಗ ಈ ಕನ್ನಡ ಟೈಪರೈಟರ್ ಓನರ್‌ಷಿಪ್ ಪರ್ಚೇಜ್ ಮಾಡಿದ್ದೇವೆ.

ಮಾಗಡಿರೋಡಿನಲ್ಲಿ ಹೈಸ್ಕೂಲು ಕೊಡುವ ಬಗ್ಗೆ ಶ್ರೀಮತಿ ಹಿರೇಮಠ ಅವರು ಹೇಳಿದ್ದಾರೆ. ನಿಜವಾಗಿಯೂ ಹಿಂದುಳಿದ ಪ್ರದೇಶದಲ್ಲಿ ಎಲ್ಲಿ ಆವಶ್ಯಕತೆ ಇದೆಯೋ ಅಂಥಲ್ಲಿ ಹೈಸ್ಕೂಲು ಕೊಡುತ್ತೇವೆ. ಇನ್‌ಫ್ಲೂಯೆನ್ಸ್ ಇದ್ದಲ್ಲಿ ಕೊಡುವುದು ಎಂದೇನೂ ಇಲ್ಲ ಅವಶ್ಯಕತೆ ಇದ್ದಲ್ಲಿ ಕೊಡಬೇಕೆಂಬುದನ್ನು ಗಮನದಲ್ಲಿಟ್ಟುಕೊಂಡು ಕೊಡುತ್ತೇವೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಅಲ್ಲಿ ಹೈಸ್ಕೂಲು ಕೊಡಿ ಎಂದು ಇನ್‌ಫ್ಲ್ಯೂಯೆನ್ಸ್ ತಂದು ಕೇಳುತ್ತಿಲ್ಲ. ಅಲ್ಲಿಯ ಬೇಡಿಕೆ ನ್ಯಾಯವಾಗಿದೆ. ಮುಖ್ಯಮಂತ್ರಿಗಳಿಗೂ ವಿದ್ಯಾ ಮಂತ್ರಿಗಳಿಗೂ ಅದು ಗೊತ್ತಿದೆ. ಅವರು ನೋಡಿದ್ದಾರೆ. ಇದನ್ನು ನಾನು ಸೀರಿಯಸ್ ಆಗಿ ಹೇಳುತ್ತಿದ್ದೇನೆ.

ಶ್ರೀ ಅಣ್ಣಾರಾವ್ ಗಣಮುಖಿ.—ಇನ್‌ಫ್ಲ್ಯೂಯೆನ್ಸ್ ತಂದಲ್ಲ ಕೊಡಬಾರದು ಎಂದು ಕೆಲವು ಸದಸ್ಯರು ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇವೆ. ಎಂದು ಉತ್ತರ ಕೊಟ್ಟಿದೆ.

ಶ್ರೀ ಪಿ. ಅಂಜನಪ್ಪ.—ಸ್ವಾಮಿ, ಪಾವಗಡ ಬ್ಯಾಕ್‌ವರ್ಡ್ ಏರಿಯಾ ಆಗಿದೆ. ಅಲ್ಲಿ ಒಂದು ಶಾಲೆ ಕೊಡುತ್ತೀರಾ?

ಶ್ರೀ ಅಣ್ಣಾರಾವ್ ಗಣಮುಖಿ.—ಹಿಂದುಳಿದ ಪ್ರದೇಶದಲ್ಲಿ ಕೊಡಲಾಗುವುದು.

Sri C. M. ARUMUGHAM.—The Hon'ble lady member said that if the Government is not going tc open a High School, she will undertake a fast from 15th, May. I ask the Hon'ble Minister whether he is willing to give the school before 15th, so that she may drop the idea of going on fast?

ಶ್ರೀ ಕೆ. ಎಲ್. ನರಸಿಂಹಯ್ಯ.—ಅಲ್ಲಿ ಹೈಸ್ಕೂಲು ಕೊಡದೇ ಹೋದರೆ ಸತ್ಯಾಗ್ರಹ ಮಾಡಿ ಉಪವಾಸ ಮಾಡುತ್ತೇನೆಂದು ಅವರು ಹೇಳಿದ್ದಾರೆ ಅಲ್ಲವೆ?

ಶ್ರೀ ಎಸ್. ಶರಣಗೌಡ.—ಉಪವಾಸ ಸತ್ಯಾಗ್ರಹ ಮಾಡಿದರೆ ಶಾಲೆ ಕೊಡುತ್ತೀರಾ?

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಎಲ್ಲರಿಗೂ ಉಪವಾಸ ಮಾಡುವದಕ್ಕೆ ಬರುವದಿಲ್ಲ. ಈ ಶಾಲೆ ಕೊಡುವ ಬಗ್ಗೆ ಪರಿಶೀಲನೆ ಮಾಡಿ ಎಂದು ಹತ್ತು ವರ್ಷಗಳಿಂದ ಹೇಳುತ್ತಿದ್ದೇವೆ. ಈಗ ಈ ಶಾಲೆ ಮಂಜೂರ ಮಾಡದೆ ಇದ್ದರೆ ಉಪವಾಸ ಮಾಡಬೇಕಾಗುತ್ತದೆ. ಆದ್ದರಿಂದ ಮಾಗಡಿರೋಡ್ ಸ್ಕೂಲ್ ಬಗ್ಗೆ ದಯವಿಟ್ಟು ಮಂತ್ರಿಗಳು ಹೇಳಬೇಕು.

ಶ್ರೀ ಅಣ್ಣಾರಾವ್ ಗಣಮುಖಿ.—ಇದರ ಬಗ್ಗೆ ಸಹಾನುಭೂತಿಯಿಂದ ವಿಚಾರ ಮಾಡುತ್ತೇವೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಸಹಾನುಭೂತಿಯಿಂದ ವಿಚಾರ ಮಾಡುತ್ತೇವೆಂದು ಹೇಳಿ ಮೀನ ಮೇಷ ಮಾಡುವುದು ಬೇಡ. ಇವತ್ತು ಸಂಜೆಯ ಒಳಗಾಗಿ ಏನೆಂಬುದನ್ನು ತಿಳಿಸಬೇಕು. ನಾನು ಇದನ್ನು ಸೀರಿಯಸ್ ಆಗಿ ಹೇಳುತ್ತೇನೆ.

Sri M. C. NARASIMHAN.—Sir, should she not take the permission of this House before she goes on fast?

Sri J. B. MALLARADHYA.—Sir, she will set a bad example to the Members on this side.

ಶ್ರೀ ಅಣ್ಣಾರಾವ್ ಗಣಮುಖಿ.—ಒಂದು ನೂರು ಶಿಕ್ಷಕರಲ್ಲಿ 39 ಶಿಕ್ಷಕರು ಅನ್‌ಟ್ರೇಂಡ್ ಆಗಿದ್ದಾರೆ. ಉಳಿದವರು ಟ್ರೇಂಡ್ ಇದ್ದಾರೆ. ಈಗ ಟ್ರೇನಿಂಗ್ ಕೊಡುವದಕ್ಕೆ ಹೆಚ್ಚು ಹೆಚ್ಚಾಗಿ 6140 Capacity ಇದೆ. ಬರುವ ಮೂರನೇ ಯೋಜನೆ ಅವಧಿಯಲ್ಲಿ 400 ಟ್ರೇನಿಂಗ್ ಇನ್‌ಸ್ಟಿಟ್ಯೂಷನ್ಸ್ ಪ್ರಾರಂಭಿಸಲಾಗುವುದು. ಬೇಸಿಕ್ ಟ್ರೇನಿಂಗ್ ಸಿಲೆಬಸ್ ಇಂಟ್ರಡ್ಯೂಸ್ ಮಾಡಿದ್ದೇವೆ. ಆದ್ದರಿಂದ ಇನ್ನು ಮುಂದೆ ಬೇಸಿಕ್ ಟ್ರೇಂಡ್ ಟೀಚರ್ಸ್ ಸಿಕ್ಕುತ್ತಾರೆ. ಇದಕ್ಕೆ ಇನ್ನೂ ಹೆಚ್ಚಿಗೆ ಸಹಾಯ ಸಿಕ್ಕುತ್ತದೆಂದು ಹೇಳಬಹುದು.

Sri G. B. SHANKAR RAO.—May I know whether the Government have a proposal to close the Training Schools in Bombay Karnatak area?

Sri ANNARAO GANAMUKHI.—They are private Schools, we are not going to close them.

ಇನ್ನು ಒಂದು ವಿಚಾರ ಹೇಳಬೇಕಾಗಿದೆ. ಟ್ರೇನಿಂಗಿಗೆ ಹೋಗುವ ಎಲ್ಲ ಶಿಕ್ಷಕರಿಗೆ ಸ್ಟೈಪೆಂಡ್ ಕೊಡಲು ಹಣ ಸಾಕಾಗುವದಿಲ್ಲ. ಆದ್ದರಿಂದ ಎಲ್ಲರನ್ನೂ ಟ್ರೇನಿಂಗಿಗೆ ಕಳಿಸಲು ಆಗುವದಿಲ್ಲ. ಪರ್ಸೆಂಟೇಜ ಪ್ರಕಾರ ಕಳಿಸುತ್ತೇವೆ. ಸ್ಟೈಪೆಂಡ್ ದೊರಕದೆ ಇದ್ದರೆ ಅವರಿಗೆ ಕಷ್ಟವಾಗುತ್ತದೆ.

ಇನ್ನು Secondary Education ಬಗ್ಗೆ ಹೇಳುವುದಾದರೆ 200 private High Schcols ಬಗ್ಗೆ provision ಮಾಡಿದ್ದೇವೆ. ಈಗ ಹೈಸ್ಕೂಲು ಸಂಖ್ಯೆ ಸಾಧಾರಣವಾಗಿ 210 ಆಗುತ್ತದೆ. ಹೋದ ವರುಷ 200 ಎಂದು ಇದ್ದಿತು. ಈ ಬಗ್ಗೆ 400 ಟೀಚರ್ಸ ನೇಮಕ ಮಾಡಲಾಗಿದೆ. 350 ಟೀಚರ್ಸ ಸಲುವಾಗಿ ಯುನಿವರ್ಸಿಟಿಯಲ್ಲಿ M.A., M.Sc. ಕೋರ್ಸ ಬಗ್ಗೆ ವ್ಯವಸ್ಥೆ ಮಾಡಬೇಕೆಂದಿದ್ದೇವೆ. ಇನ್ನು ಕೆಲವು ಹೈಸ್ಕೂಲುಗಳನ್ನು Higher Secondary Schools ಆಗಿ ಪರಿವರ್ತನೆ ಮಾಡಬೇಕೆಂದಿದೆ. ಈಗ ಸದ್ಯಕ್ಕೆ ಒಂಭತ್ತು ಕಾಲೇಜುಗಳಿವೆ. ಇನ್ನು ಮುಂದೆ ಟ್ರೇಂಡ್ ಟೀಚರ್ಸ ಸಿಕ್ಕುತ್ತಾರೆ.

ಅಂಟೆಂಡೆನ್ಸ್ ಸ್ಕಾಲರ್ ಷಿಪ್‌ಗಳಿಗಾಗಿ 50 ಲಕ್ಷ ಒದಗಿಸಿದ್ದೇವೆ. ಮುಂದಿನ ಐದು ವರ್ಷಗಳಲ್ಲಿ ವ್ಯಾಸಂಗಮಾಡತಕ್ಕ ಮಕ್ಕಳಲ್ಲಿ ಆರು ಲಕ್ಷ ಹುಡುಗಿಯರಿರುತ್ತಾರೆ, ಅವರಿಗೆ ಸ್ಲೇಟು ಪುಸ್ತಕ, ಪೆನ್ಸಿಲ್, ಉಡುಪು, ಈ ಅನುಕೂಲಗಳನ್ನು ಕೊಡುವ ಸಲುವಾಗಿ ಆರುಲಕ್ಷ ರೂಪಾಯಿ ಒದಗಿಸಿದ್ದೇವೆ. ಸ್ವಲ್ಪ ಉತ್ತೇಜನ ಕೊಟ್ಟಲ್ಲಿ ಬಡಮಕ್ಕಳು ಓದಲು ಮುಂದೆ ಬರುತ್ತಾರೆಂದು ಈ ರೀತಿ ಹಣವನ್ನೊದಗಿಸಿದ್ದೇವೆ.

ಮಧ್ಯಾಹ್ನದ ಊಟದ ವ್ಯವಸ್ಥೆ ಮದ್ರಾಸಿನಲ್ಲಿ ಬಹಳ ಹೆಚ್ಚಾಗಿ ಮಾಡಿದ್ದಾರೆಂದು ಹೇಳಿದರು. ಕೇಂದ್ರದಿಂದ ಇದಕ್ಕಾಗಿ ನಮಗೆ ಸಿಕ್ಕಿರುವ ಸಹಾಯ ಕಡಿಮೆ. ಮುಂದೆ ಅವರು ಹೆಚ್ಚಿನ ಸಹಾಯ ಮಾಡಿದರೆ ನಾವೂ ಹೆಚ್ಚು ಪ್ರಯತ್ನ ಮಾಡಬಹುದು ಎಂದೆನ್ನಿಸುತದೆ. Midday Meals Scheme is very altractive.

Sri F. H, MOHSIN.—You have enunciated a policy that Government will start new schools only for girls or for labour and backward areas. Would it not be advisable to encourage linguistic minorities like Muslims and Maharashtrians by starting high schools in their medium ?

Sri ANNARAO GANAMUKHI.—That suggestion will be considered. ಉಪಾಧ್ಯಾಯರಿಗೋಸ್ಕರ ಹೆಚ್ಚು ಮನೆಗಳು ಬೇಕು ಎಂದು ವಾದ ಮಾಡಿದ್ದಾರೆ. ಇಂಡಿಯಾ ಸರ್ಕಾರದವರ ಮನೆಗಳನ್ನು ಕಟ್ಟುವ ಯೋಜನೆ ಏನಿದೆ ಅದರಲ್ಲಿ Adjust ಆದರೆ ಪರಿಶೀಲನೆ ಮಾಡುತ್ತೇವೆಂದು ಮಾತ್ರ ಹೇಳಬಹುದು.

ಪ್ರೈಮರಿ ಶಾಲೆಗಳಲ್ಲಿರುವ ಪದವೀಧರರಾದ ಉಪಾಧ್ಯಾಯರನ್ನು ಹೈಸ್ಕೂಲುಗಳಲ್ಲಿ ನೇಮಿಸಬೇಕು ಎಂದು ಶ್ರೀಮತಿ ರತ್ನಮ್ಮ ಮಾಧವರಾಯರು ಹೇಳಿದ್ದಾರೆ. Cadre and Recruitment rules ನಲ್ಲಿ ಕೆಲವು ಭಾಗ ಇವರಿಗೆ ಪ್ರಮೋಷನ್‌ಗೋಸ್ಕರ ಕೊಡಬೇಕೆಂದು ಅವಕಾಶವನ್ನು ಈಗಾಗಲೇ ಕಲ್ಪಿಸಿದ್ದೇವೆ.

Sports grant ತೀವ್ರವಾಗಿ ಸಿಕ್ಕುವುದಿಲ್ಲವೆಂದು ಹೇಳುತ್ತಾರೆ, ಎಷ್ಟೋವೇಳೆ ಬಹಳ ನಿಧಾನವಾಗಿ ಸಿಕ್ಕುತ್ತದೆಂದು ಹೇಳುತ್ತಾರೆ. ಯಾವ ಪ್ರಕಾರದಿಂದ ನಿಧಾನವಾಗುವುದನ್ನು ಕಡಿಮೆ ಮಾಡಬಹುದು ಎಂದು ನೋಡುತ್ತಿದ್ದೇವೆ.

ಮಲೆನಾಡು ಭಾಗಗಳಲ್ಲಿ ಹೈಸ್ಕೂಲನ್ನು ಮಂಜೂರು ಮಾಡಬೇಕೆಂದು ಹೇಳಿದ್ದಾರೆ. ಹಿಂದುಳಿದ ಭಾಗಗಳು ಯಾವುದು ಇದೆ ಎಂಬುದನ್ನು ನೋಡಿ ವಿಚಾರಮಾಡುತ್ತೇವೆಂದು ಹೇಳುತ್ತೇನೆ.

ಚಿಕ್ಕಮಗಳೂರು, ಮಂಡ್ಯ, ಕೋಲಾರ, ಈ ಊರುಗಳಲ್ಲಿರುವ ಕಾಲೇಜುಗಳನ್ನು upgrade ಮಾಡಬೇಕೆಂದು ಹೇಳಿದ್ದಾರೆ. ಸರ್ಕಾರದಕಡೆಯಿಂದ ಕಾಲೇಜನ್ನು ಪ್ರಾರಂಭ ಮಾಡಬೇಕೆಂಬುದು ಅವರ ಅಭಿಪ್ರಾಯವಿರುತ್ತದೆಂದು ಕಾಣುತ್ತದೆ. ಸರ್ಕಾರದ ಕಡೆಯಿಂದ ಡಿಗ್ರಿ ಕಾಲೇಜುಗಳನ್ನು ತೆರೆಯುವುದಕ್ಕಿಂತಲೂ ಖಾಸಗಿಸಂಸ್ಥೆಗಳು ಮುಂದೆ ಬಂದು ಕಾಲೇಜುಗಳನ್ನು ಪ್ರಾರಂಭ ಮಾಡಿದರೆ ಚೆನ್ನಾಗಿರುತ್ತದೆ. ಕಡ್ಡಾಯ ಶಿಕ್ಷಣಕೋಸ್ಕರ ಎಷ್ಟೋ ಹಣ ಖರ್ಚು ಮಾಡುವಕಾಲಕ್ಕೆ ಸಾರ್ವಜನಿಕರ ಸಹಾಯ ಸಹ ಸರ್ಕಾರಕ್ಕೆ ಬೇಕೆನ್ನುವ ವಿಚಾರವನ್ನಿಟ್ಟುಕೊಂಡು ಖಾಸಗಿಯವರು ಮುಂದೆ ಬರತಕ್ಕದ್ದು ಒಳ್ಳೆಯದಿದೆ ಎಂದು ಹೇಳುತ್ತೇನೆ.

ಶ್ರೀ ಡಿ. ಅಬ್ದುಲ್ ರಷೀದ್.—ಖಾಸಗಿಯವರು ಮುಂದಕ್ಕೆ ಬರದೆ ಹೋದರೆ, ಸರ್ಕಾರ ಕಾಲೇಜುಗಳನ್ನು upgrade ಮಾಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಅಣ್ಣಾರಾವ್ ಗಣಮುಖಿ.—ಹೋದವರ್ಷ ಬಿದರೆಯಲ್ಲಿ ಇದೇ ರೀತಿ ಕೇಳಿದರು. ಸರ್ಕಾರದ ಕಡೆಯಿಂದ ಕಾಲೇಜನ್ನು ತೆರೆಯಿರಿ ಎಂದು ಕೇಳಿದರು. ನಮ್ಮ ಕಡೆಯಿಂದ ಖಂಡಿತ ಆಗುವುದಿಲ್ಲವೆಂದು ಹೇಳಿದೆವು. ಈಗ ಖಾಸಾಗಿಯವರೇ ಅಲ್ಲಿ ಕಾಲೇಜನ್ನು ತೆರೆದಿದ್ದಾರೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಕಟ್ಟಡಗಳಿಗಾಗಿ ಸಾರ್ವಜನಿಕರಿಂದ ಸಹಾಯ ಬರಬೇಕು ಎಂದು ಹೇಳುತ್ತೀರಿ, ಸೆಕೆಂಡರಿ ವಿದ್ಯಾಭ್ಯಾಸದ ವಿಚಾರದಲ್ಲಿ ಖಾಸಗಿಯವರು ಮುಂದೆ ಬರಬೇಕೆಂದು ಹೇಳುತ್ತೀರಿ. ಕಾಲೇಜು ವಿದ್ಯಾಭ್ಯಾಸಕ್ಕೆ ದುಡ್ಡಿಲ್ಲವೆಂದು ಹೇಳುತ್ತೀರಿ.

ಶ್ರೀ ಅಣ್ಣಾರಾವ್ ಗಣಮುಖಿ.—ಅದರಲ್ಲಿಯೂ ಬೇಕು, ಇದರಲ್ಲಿಯೂ ಬೇಕು ಎಂದರೆ ಹೇಗೆ ಆಗುತ್ತದೆ ?

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಹೈಯರ್ ಯುಜುಕೇಷನ್‌ಗೆ ಅವಕಾಶ ಮಾಡದೆ ಇದ್ದರೆ ಹೇಗೆ ? ಒಂದೊಂದು ಡಿಸ್ಟ್ರಿಕ್ಟಿಗೆ ಒಂದೊಂದು ಕಾಲೇಜ್ ಇಲ್ಲದೇ ಹೋದರೆ ಹೇಗೆಸ್ವಾಮಿ.

ಶ್ರೀ ಅಣ್ಣಾರಾವ್ ಗಣಮುಖಿ.—ನೀವು ಹೇಳುವುದು ಹೇಗಿದೆ ಎಂದರೆ ಮನೆಯಲ್ಲಿ ಸಾದೆಯಿಲ್ಲ, ರೊಟ್ಟಿ ಮಾಡಲು ಹಿಟ್ಟಿಲ್ಲ. ಹೆಂಚಿಲ್ಲ, ಆದರೂ ಮನೆತುಂಬ ಇರುವ ಮಂದಿಗೆಲ್ಲ ರೊಟ್ಟಿ ಮಾಡಿಕೊಡು ಎಂದು ಅತ್ತೆ ಸೊಸೆಗೆ ಹೇಳಿದ ಹಾಗೆ ಇದೆ.

ಶ್ರೀ ಬಿ. ಕೆ. ನಾಗನೂರ್.—ಸ್ವಾಮಿ, ಇವರಲ್ಲಿ ಅತ್ತೆ ಯಾರು, ಸೊಸೆ ಯಾರು ಎಂದು ತಿಳಿಯಲಿಲ್ಲ !

ಶ್ರೀ ಅಣ್ಣಾರಾವ್ ಗಣಮುಖಿ.—ಈಗ ನಮಗೆ ಕಾಟ ಕೊಡುತ್ತಿರುವವರೇ ಅತ್ತೆ. ಇಂಥ ಅತ್ತೆಯವರು ಬೇಕಾಗಿಲ್ಲವೆಂದು ಹೇಳುತ್ತಿದ್ದೇನೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಾನು ಅತ್ತೆಯಾಗಲು ಸಿದ್ಧವಿಲ್ಲ, ತಾವು ಸೊಸೆ ಸಹ ಆಗಬೇಡಿ.

ಶ್ರೀ ಅಣ್ಣಾರಾವ್ ಗಣಮುಖಿ.—ಶ್ರೀಮಾನ್ ವಿ. ಶ್ರೀನಿವಾಸ ಶೆಟ್ಟರು ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲುಗಳನ್ನು ತಾಲ್ಲೂಕು ಬೋರ್ಡಿಗೆ ಕೊಡಬಾರದೆಂದು ಹೇಳಿದರು. ಇನ್ನೊಂದು Machinery create ಮಾಡಬೇಕು, ಅವರ ಮೂಲಕ ನಡೆಸಬೇಕು, ಖಾಸಗಿಯವರಿಗೆ ಬಿಡಕೂಡದು ಎಂದು ಹೇಳಿದರು. ಈಗಿರುವ ಹೈಸ್ಕೂಲುಗಳನ್ನು ಖಾಸಗಿಯವರಿಗೆ ಕೊಡಬೇಕೆನ್ನುವುದು ನಮ್ಮ ನೀತಿಯಲ್ಲ. ಯಾರಾದರೂ ತೃಪ್ತಿಕರವಾಗಿ ನಡೆಸುತ್ತಿದ್ದರೆ, ಅಂಥ ಮ್ಯಾನೇಜ್‌ಮೆಂಟಿನವರು ಮುಂದೆ ಬಂದರೆ, ಅವರಿಗೆ ವಹಿಸುವ ವಿಚಾರವನ್ನು ಪರಿಶೀಲಿಸುತ್ತೇವೆ. ಇಲ್ಲದೇ ಹೋದರೆ ಈಗಿರುವಂತೆಯೇ ಇರುತ್ತದೆ. ಅಲ್ಲದೆ ಧಾರ್ಮಿಕ ಸಂಸ್ಥೆಗಳ

ಕ್ಕೆಗೆ ಹೈಸ್ಕೂಲುಗಳನ್ನು ಕೊಡುತ್ತೀರಿ. ಆದ್ದರಿಂದ ಜನರಿಗೆ ಹಾನಿಯಾಗುತ್ತದೆ ಎಂದು ಕೆಲವರು ಹೇಳಿದರು. ಆ ಪ್ರಕಾರ ಮಾಡುವುದಿಲ್ಲ ಮತ್ತು ಆ ಪ್ರಕಾರ ವಿಚಾರವೂ ಮಾಡಿಲ್ಲ.

Sri G. DUGGAPPA.—What was the special circumstances that prompted the Government to hand over the Sandur District Board School to a private agency ?

Sri ANNARAO GANAMUKHI.—The District Board itself passed a resolution. If the management itself wants to hand over, how do we come into the picture ?

ಡಿಸ್ಟ್ರಿಕ್ಟ್ ಬೋರ್ಡಿನವರು ಖಾಸಗಿಯವರಿಗೆ ತಮ್ಮ ಶಾಲೆಗಳನ್ನು ವಹಿಸಿ ಕೊಡುತ್ತೇವೆಂದರೆ ನಾವು ಬೇಡವೆಂದು ಹೇಳುವುದಕ್ಕೆ ಹೇಗೆ ಆಗುತ್ತದೆ ? ಈಗಿನ ಸ್ಥಿತಿ ಬೇರೆಇದೆ. ಈಗ ಜಿಲ್ಲಾ ಬೋರ್ಡ್‌ಗಳಲ್ಲಿ ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿದ್ದ ಶಾಲೆಗಳೆಲ್ಲ ಡೆಪ್ಯೂಟಿ ಕಮಿಷನರ ಅಧಿನಕ್ಕೆ ಒಳಪಟ್ಟವೆ.

Sri C. K. RAJIAH SETTY.—Even the District Boards should abide by the Government's General policy, and if any District board does not abide by it, it is for the Government to pull it up.

ಶ್ರೀ ಅಣ್ಣಾರಾವ್ ಗಣಮುಖಿ.—ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ಗೆ ಈ ಅಧಿಕಾರವನ್ನು ಕೊಡಬೇಕೆನ್ನುವುದನ್ನು ವಿಚಾರ ಮಾಡುತ್ತಿದ್ದೇವೆ.

ಕೆಲವು ಖಾಸಗಿ ಸಂಸ್ಥೆಗಳವರು ಹೆಚ್ಚು ಫೀ ತೆಗೆದುಕೊಳ್ಳುತ್ತಿದ್ದಾರೆಂದು ಹೇಳಿದರು ಹೆಚ್ಚಿಗೆ ಫೀ ತೆಗೆದುಕೊಳ್ಳುವ ಸಂಸ್ಥೆಗಳು ಯಾವುವು ಇವೆ, ಅವುಗಳಿಗೆ ನಾವು ಗ್ರಾಂಟ್ ಕೊಡುವುದಿಲ್ಲ. ಅಂಥವರಿಗೆ ಗ್ರ್ಯಾಂಟ್ ಕೊಡತಕ್ಕ ಪ್ರಶ್ನೆ ಬರುವುದಿಲ್ಲ.

ಪೊನಂಪೇಟೆಗೆ ಹೈಸ್ಕೂಲು ಕೊಡಬೇಕೆಂದಿದ್ದುದನ್ನು ಮಡಕೇರಿಗೆ ಬದಲಾಯಿಸಲು ಏರ್ಪಾಡು ಮಾಡಿದ್ದಾರೆ, ಏಕೆಂದರೆ ಅದು ಪಿ. ಎಸ್. ಪಿ. ಕ್ಷೇತ್ರವಾಗಿರುವುದರಿಂದ ಇಲ್ಲಿ ಮಾಡುತ್ತಿದ್ದಾರೆಂದು ಹೇಳಿದರು. ಹಾಗೇನೂ ಅಲ್ಲ ಎಲ್ಲ ಕಡೆಗೂ ಸೌಲಭ್ಯಗಳಿದ್ದರೆ ಸಿಗುತ್ತದೆ. ಇದನ್ನೆಲ್ಲಾ ಇನ್ನೂ ಪರಿಶೀಲನೆ ಮಾಡುತ್ತಿದ್ದೇವೆ. ಮೊದಲು ಎಲ್ಲಿ ತೆಗೆಯಬೇಕು, ಎಲ್ಲಿ ತೆಗೆಯಕೂಡದು ಎನ್ನುವುದರ ಬಗ್ಗೆ ಈ ಜೂನ್ ತಿಂಗಳೊಳಗಾಗಿ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ. ಮತ್ತು 1,200 ರೂಪಾಯಿಗಳ ಆದಾಯವಿರುವಂತೆ ಮಾಡಿರುವ ಆರ್ಡರಿನ ಪ್ರಕಾರ ಹೆಚ್ಚಿಗೆ fraud ಆಗುತ್ತಿದೆ ಎಂದು ಹೇಳಿದರು. ಈ ರೀತಿಯಾಗಿ ವಿನಾಯತಿಯನ್ನು ಕೊಡುವಾಗ ಅಲ್ಲಿರುವ ಟೀಚರುಗಳು ಆ ರೀತಿಯಾಗಿ fraud ಇದ್ದರೆ ಆಯಾ ತಾಲ್ಲೂಕಿನ ತಹಶೀಲುದಾರರುಗಳಿಗೆ ಮತ್ತು D.E.O. ಗಳಿಗೆ ಚೆಕ್ ಮಾಡಬೇಕು ಎಂದು ಆಗಲೇ ಇನ್‌ಸ್ಟ್ರಕ್ಷನ್‌ಗಳನ್ನು ಕೊಡಲಾಗಿದೆ. ಯಾರಾದರೂ ಒಂದು ವೇಳೆ ತಪ್ಪು ಮಾಡಿದ್ದರೆ ಅಂತಹವರಿಂದ ಒಂದಕ್ಕೆರಡರಷ್ಟು ಫೈನು ಆಗಿ ವಸೂಲು ಮಾಡಲಾಗುತ್ತದೆ. ಇನ್ನು ಷೆಡ್ಯೂಲು ಕ್ಯಾಸ್ಟ್ ಮತ್ತು ಟ್ರೈಬ್ಸ್‌ಗಳ ವಿಚಾರದಲ್ಲಿ ಕೂಡ ಈಗ ಆರ್ಡರನ್ನು ಸ್ಟೇ ಮಾಡಿದ್ದೇವೆ ಮುಂದೆ ಇದನ್ನು ವಿಚಾರ ಮಾಡಬೇಕೆಂದಿದ್ದೇವೆ. ಎಷ್ಟು ಇನ್‌ಕಂ ಈ ಕೋಮಿಗೆ ಸಂಬಂಧಪಟ್ಟವರಿಗೆ ಇರಬಹುದು ಎನ್ನುವುದನ್ನೆಲ್ಲಾ ನಾವು ವಿಚಾರ ಮಾಡುತ್ತಿದ್ದೇವೆ.

ಇನ್ನು ಜನರಲ್ ಹಾಸ್ಟೆಲ್ ಸ್ಕೀಮು ಏರಡು ಮಾಡಿರುವುದರಲ್ಲಿ ಕಮ್ಯುನಾಲಸಂಗೆ ಅವಕಾಶವಾಗುತ್ತಿದೆ ಎಂದು ಹೇಳಿದರು, ಅಷ್ಟಕ್ಕೂ ಹರಿಜನರಿಗೆ ಇಲ್ಲಿ ಪ್ರವೇಶವಿಲ್ಲ. ಹಾಗೂ ಹರಿಜನರಿಗೆ ಯಾರಾದರು ಪ್ರವೇಶಕ್ಕೆ ಅವಕಾಶಕೊಟ್ಟಿದ್ದರೆ ಅಂತಹ ಕಡೆಗಳಲ್ಲಿ ಸರಕಾರದಿಂದ ಗ್ರ್ಯಾಂಟುಗಳನ್ನು ತೆಗೆದುಕೊಳ್ಳುತ್ತಾರೆ. ಇದನ್ನು ಕೂಡ ಕಮ್ಯೂನಲ್ ಮೇಲೆ ಮಾಡುತ್ತಾರೆಂದು ಹೇಳಿದರು. ಇಲ್ಲಿಯವರೆಗೂ ಇದರ ವಿಚಾರದಲ್ಲಿ ಕಮ್ಯೂನಲ್ ಲೈನ್ಸ್ ಮೇಲೆ ನಡೆಯು

(ಶ್ರೀ ಅಣ್ಣಾರಾವ್ ಗಣಮುಖಿ)

ಬಾರದು ಎನ್ನುವುದನ್ನು ಒಪ್ಪುತ್ತೇನೆ. ಶೇಕಡಾ 60 ರಷ್ಟು ಕಮ್ಯೂನಲ್ ಹಾಸ್ಟಲುಗಳನ್ನು ತೆಗೆಯುತ್ತಾರೆ. ಇದರಲ್ಲಿ ಶೇಕಡಾ 40 ರಷ್ಟು ದುರುಪಯೋಗವಾಗುತ್ತದೆ ಎಂದು ಹೇಳಿದ್ದಾರೆ. ರೂಲ್ಸು ಪ್ರಕಾರ ಮ್ಯಾನೇಜ್‌ಮೆಂಟಿನವರು ಅರ್ಫನೇಜ್‌ಗಳನ್ನು ನಡೆಸುತ್ತೇವೆ ಎಂದು ಹೇಳಿದರೆ ಗ್ರ್ಯಾಂಟನ್ನು ಕೊಡುವುದಾಗಿ ಹೇಳಿದ್ದೇವೆ. ಅರ್ಫನೇಜ್‌ಗಳನ್ನು ಮಾಡುತ್ತೇವೆಂದು ಯಾರಾದರೂ ಹೇಳಿದರೆ ಅವರಿಗೆ ಗ್ರ್ಯಾಂಟುಗಳನ್ನು ಕೊಟ್ಟು ನಡೆಸಲಿಕ್ಕೆ ಸಹಾಯ ಮಾಡಬಹುದು. ಆದರೆ ಈ ಸ್ಕೀಮಿನಲ್ಲಿ ನಡೆಸತಕ್ಕವರು ಏನಾದರೂ ತಪ್ಪು ಮಾಡುತ್ತಿದ್ದರೆ ಅದನ್ನು ಡಿಪಾರ್ಟುಮೆಂಟಿನ ಗಮನಕ್ಕೆ ತಂದರೆ ನಾವು ಅಂತಹ ಕಡೆಗಳಲ್ಲಿ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

[Mr. SPEAKER in the Chair]

Sri C. M. ARUMUGHAM.—Hostels only for scheduled caste people are going on. Unless you admit other students, you do not get grants. The Social Department is concerned with Scheduled Caste education and you are also concerned with Scheduled Caste people education.

Sri KADIDAL MANJAPPA.—I would like to repeat what I said. If there are any questions they may be put at the end.

Sri C. M. ARUMUGHAM.—If that is the request by the Hon'ble Minister we request you to adjourn the House and we will meet tomorrow. Let him answer tomorrow.

Mr. SPEAKER.—We will sit a little longer.

ಶ್ರೀ ಅಣ್ಣಾರಾವ್ ಗಣಮುಖಿ.—ಜನರಲ್ ಹಾಸ್ಟಲ್ ಸ್ಕೀಮುಗಳಲ್ಲಿ ಹರಿಜನರು ಮತ್ತು ಎಷ್ಟೋ ಹಿಂದುಳಿದ ಜನರು ಇದ್ದಾರೆ. ಜನರಲ್ ಹಾಸ್ಟಲ್ಲಿಗೆ ಮೇಂಟೆನೆನ್ಸ್ ಗ್ರಾಂಟನ್ನು ಕೊಡುವುದಿಲ್ಲ ಇಂತಹ ಸಜೆಷನ್ನುಗಳು ಯಾವುದಾದರೂ ಬಂದರೆ ಇದನ್ನು ನಿಜವಾಗಿಯೂ ಎನ್‌ಕ್ವೈರಿ ಮಾಡಿ ತಪ್ಪು ಆಗಿದ್ದರೆ ಅದನ್ನು ತಿದ್ದುತ್ತೇವೆಂದು ಇಷ್ಟು ಹೇಳಬಲ್ಲೆ. ಮುಂದೆ ಯೂನಿವರ್ಸಿಟಿ ವಿಚಾರಕ್ಕೆ ಬರುತ್ತೇನೆ.

Sri B. L. NARAYANASWAMY.—It is the public which maintains hostels. Only in case of orphans, we have made this arrangement and no Ex-Mysore area was taking the benefit of the orphanage scheme. But now, it is made applicable to the whole State.

ಕೆ. ಜಿ. ಎಫ್. ಆಫ್ ಗ್ರೇಡಿಂಗ್ ಸ್ಕೂಲು ವಿಚಾರ ಏನೂ ಹೇಳಲಿಲ್ಲ.

ಶ್ರೀ ಅಣ್ಣಾರಾವ್ ಗಣಮುಖಿ.—ತಾವು ಹೇಳಿರುವುದನ್ನೆಲ್ಲ ಮನಸ್ಸಿನಲ್ಲಿಟ್ಟುಕೊಂಡಿದ್ದೇನೆ. ಮತ್ತು ಅವೆಲ್ಲವನ್ನು ನೋಟು ಮಾಡಿಕೊಂಡಿದ್ದೇನೆ. ಅದನ್ನು ಪರಿಶೀಲನೆಮಾಡಿ ಯಾವ ಯಾವುದನ್ನು ಮಾಡಲಿಕ್ಕೆ ಸಾಧ್ಯ ಎನ್ನುವುದನ್ನು ಪರಿಶೀಲನೆ ಮಾಡಬೇಕು. ಮತ್ತು ಆ ರೀತಿ ಇಲ್ಲೆ ಎಲ್ಲಾ ಸದಸ್ಯರೂ ಹೇಳಿರುವ ವಿಚಾರಗಳಿಗೆಲ್ಲಾ ಉತ್ತರ ಕೊಡಬೇಕಾದರೆ ಒಂದು ದಿವಸಕಾಲ ಪೂರ್ತಿಯಾಗಿ ಬೇಕಾಗುತ್ತದೆ ಎಂದು ನಾನು ಮೊದಲೇ ಹೇಳಿದ್ದೇನೆ.

Sri R. CHENNIGARAMIAH.—Mr. Arumugham was just telling that the hostels maintained by the Social Welfare Department are to be taken over by the Education Department because hostels are meant for education and it is the liability of the Education Department. Instead

of Education Department running these hostels, if it is entrusted to Social Welfare Department, it will be a burden on that Department. There will be two kinds of administration in the Education Department, dual administration and dual control. It may not be fair. Instead of that, all the hostels meant for education should be taken over by the Education Department and run by them.

ಶ್ರೀ ಅಣ್ಣಾರಾವ್ ಗಣಮುಖಿ.—It is a good suggestion. ಇದು ಐತಿಹಾಸಿಕ ದೃಷ್ಟಿಯಿಂದ ನೋಡಬೇಕಾದರೆ ಹೊರಗಿನಿಂದ ಬಂದ ಏರಿಯಾಗಳಲ್ಲಿ ಸೋಷಿಯಲ್ ವೆಲ್‌ಫೇರು ಇಲಾಖೆಯವರು ನಡೆಸುತ್ತಿದ್ದಾರೆ. ಆದರೆ ಇಲ್ಲಿ Ex-Mysore ಏರಿಯಾದಲ್ಲಿ ಎಜುಕೇಷನ್ನು ಡಿಪಾರ್ಟುಮೆಂಟಿನವರು ಮಾಡುತ್ತಿದ್ದಾರೆ. ಸೋಷಿಯಲ್ ಸರ್ವೀಸು ಡಿಪಾರ್ಟುಮೆಂಟು ಹೊಸದಾಗಿ ಹಿಂದುಳಿದವರಿಗಾಗಿ ಎಂದು ಮಾಡುತ್ತಿದ್ದಾರೆ. ಇವನ್ನೆಲ್ಲಾ ಯುನಿಫಾರಂ ಆಗಿ ಮಾಡಬೇಕೆಂದು ಈಗ ಇದೆ. ಇಲ್ಲಿ ಎಷ್ಟೋ ಜನ ಹರಿಜನ ಸದಸ್ಯರೂ ಇದ್ದಾರೆ. ಅವರುಗಳೆಲ್ಲ ಕರೆತು ವಿಚಾರಮಾಡಿ ಯಾವರೀತಿ ಮಾಡಬೇಕೋ ಅದನ್ನು ಹೇಳಿದರೆ ಇಲ್ಲಿ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.

Sri R. CHENNIGARAMIAH.—Because the Education Department is not prepared to open new hostels and they are not prepared to increase their budget under the Education Head, the Social Welfare Department are undertaking the burden of hostels. I would request the Education Minister to take over the Responsibility and increase the budget of the Education Department in which case, Social Welfare Department will not interfere. Because you are not prepared to increase your Budget and you are not prepared to take the responsibility of running these hostels, the Social Welfare Department are running them. If you are taking over these Hostels, certainly they do not want to take this burden.

Sri ANNARAO GANAMUKHI.—That is a good suggestion. We will consider. Whatever we spend in the Education Department or Social Welfare Department, it is the same Government money.

ಈಗ ಶ್ರೀಮಾನ್ ಮಲ್ಲಾರಾಧ್ಯರವರು ಬಹಳ ಕಟುವಾಗಿ ಮೈಸೂರು ಯೂನಿವರ್ಸಿಟಿಯ ವಿಚಾರದಲ್ಲಿ ಟೀಕೆ ಮಾಡಿದ್ದಾರೆ. ಅದಕ್ಕೆ ಉತ್ತರವಾಗಿ ಇಲ್ಲಿ ಹೇಳುವಾಗ ಯಾವ ಯಾವ ಪಾಯಿಂಟುಗಳನ್ನು ಎಷ್ಟು ಹೇಳಿದ್ದಾರೆ, ಅವುಗಳನ್ನೆಲ್ಲಾ ಪರಿಶೀಲನೆ ಮಾಡಿದ ನಂತರ ಆ ಪಾಯಿಂಟುಗಳಲ್ಲಿ ಏನೂ ತಪ್ಪಿಲ್ಲವೆಂದು ನನಗನಿಸುತ್ತದೆ. ಇದರಲ್ಲಿ ಅವರು ಹೇಳಿರುವುದು :

> "Draft Report and Accounts are placed before the Syndicate which were refused. It was placed before the Senate and it had not passed."

ಇದರಲ್ಲಿ ರಿಪೋರ್ಟು ಸೆನೆಟ್ಟಿನ ಮುಂದೆ ಬಂದು ಪಾಸಾಗುತ್ತದೆ. ಮೀಟಿಂಗಿನಲ್ಲಿ ಬರದೇ ಹೇಗೆ ಪಾಸಾಗುತ್ತದ ?

Sri J. B. MALLARADHYA.—It is not correct statement. It did not come up before the Syndicate. Then false information must have been furnished to you. Here are two Syndicate Members. It is never brought before the Syndicate.

Sri G. DUGGAPPA.—It was brought before the Syndicate and it approved the modified report.

Sri ANNARAO GANAMUKHI.—This is the information I have received: "The Annual Report of the University was presented to Syndicate on 9th December 1960 at Mysore. The following is the resolution: 'Resolved that the Annual Report for 1959-60 as modified be approved.'" This is the proceedings. Further the Annual Report was discussed on 31st December and the Members appreciated the way in which annual report was presented with several additional information for the first time in the history of University and the report was unanimously accepted by the House. There was no even a single dissentient voice.

Sri J. B. MALLARADHYA.—What you said that it was discussed on 31st is correct. But the point raised by me is not answered. ಸ್ಯಾಚುಟರಿ ಮೀಟಿಂಗಿನಲ್ಲಿ ಕನ್‌ಸೀಡರ್ ಮಾಡದೆ ಅಡ್ಪರ್ಟ್ ಮಾಡಿದಿರಿ.

6-00 P.M.

Under what constitutional provisions, the Chancellor can issue an Ordinance ? How can two people continue for the last nine months in spite of its being irregular. Do you want to support such a thing ? It would be very unfair.

Sri ANNARAO GANAMUKHI.—I am the Chairman of the Sports Council. I am the Chairman of the Sangeetha Nataka Academi. If I sign as Education Minister, can you hold me responsible on that basis ?

Sai J. B. MALLARADHYA.—Two members are continued in the Syndicate irregularly for the last nine months.

Sri ANNARAO GANAMUKHI.—That is a different thing. ಟೆಕ್ನಿಕಲ್ ಡಿಫಿಕಲ್ಟಿ ಇದೆ. ಅದನ್ನು remove ಮಾಡುತ್ತೇವೆ.

Sri J. B. MALLARADHYA.—The High Court has already held that it is illegal.

Sri K. PUTTASWAMY.—Is there a finding on this issue ?

Sri ANNARAO GANAMUKHI.—I do not think, there is any finding.

The Academic Council is the authority which declares result by adding some grace marks. This is stated to be the misuse of powers.

ಗೌನ್ ಮತ್ತು ಹುಡ್ ಖರೀದಿ ಮಾಡಿದ ವಿಚಾರದಲ್ಲಿ ಅಕ್ಷೇಪಿಸಿದರು. ಇದು ಸಣ್ಣ ವಿಷಯ. ಎರಡನೆಯದಾಗಿ ವೈಸ್ ಛಾನ್ಸಲರು ಎಗ್ಸಿಕ್ಯುಟಿವ್ ಹೆಡ್.

The gown and hood were meant for the Vice-Chancellor. The purchase was ordered by him under the powers delegated to him as the Head of the Department as per Government Order, dated 20th March 1957 and 20th September 1959. ಗೌನ್ ಮತ್ತು ಹುಡ್ ಹಳೆಯದಾಗಿದ್ದುದರಿಂದ ಹೊಸದನ್ನು ಕೊಂಡುಕೊಳ್ಳಬೇಕಾಯಿತು. ಅದನ್ನು ಅದರು ಮನೆಗೆ ತೆಗೆದುಕೊಂಡು ಹೋಗುವುದಿಲ್ಲ.

Sri J. B. MALLARADHYA.—Are you aware that the Audit has taken objection to the payment of the Bill and the Vice-Chancellor has overruled that objection. If the audit taken any objection, even the Chief Minister cannot draw his salary.

Sri ANNARAO GANAMUKHI.—Individual items cannot be placed before the Syndicate.

ಎಗ್ಸಾಮಿನರ್‌ಷಿಪ್ ಕೊಡುವುದು, ಎಗ್ಸಾಮಿನರ್ಸ್ ನೇಮಿಸುವುದು ಅಕೆಡಮಿಕ್ ಕೌನ್ಸಿಲ್ ಮತ್ತು ಎರಡನೆಯ ಬಾಡಿ. ಸಿಂಡಿಕೇಟ್ ವೈಸ್ ಛಾನ್ಸಲರ್‌ಗೆ ಅಧಿಕಾರ ಕೊಟ್ಟಿದ್ದರಿಂದ ವೇಕೆನ್ಸಿ ಬಿದ್ದರೆ ಅವರು ಭರ್ತಿ ಮಾಡಬೇಕಾಗಿತ್ತು. ಆದುದರಿಂದ ಅವರದೇನೂ ತಪ್ಪಿಲ್ಲ ಎಂದು ಹೇಳಬಯಸುತ್ತೇನೆ.

Sri J. B. MALLARADHYA.—What about the misuse of power while declaring the result ?

Sri ANNARAO GANAMUKHI.—In the B.L. examination, one of the papers was Law of evidence and Civil Procedure and Limitation Act. The paper minimum was one-third that is 33 1/3 marks. An office note was put up for the Vice-Chancellor saying that half or more should be rounded up to the next higher digit and less than half should be rounded up to the next lower digit. ಈಕ್ವಲೆಂಟ್ ಕಮಿಟಿ ನಿರ್ಣಯ ಮಾಡಿರುವುದನ್ನು ಅವರು ಕಾರ್ಯರೂಪಕ್ಕೆ ತಂದಿದ್ದಾರೆ. ವೈಸ್ ಛಾನ್ಸಲರ್ ಎಗ್ಸಿಕ್ಯುಟಿವ್ ಆಫೀಸರು.

Sri J. B. MALLARADHYA.—Is it not a fact that the Vice-Chancellor permitted some students to take the examination contrary to the decision of the Syndicate and the Academic Council ?

ಶ್ರೀ ಅಣ್ಣಾರಾವ್ ಗಣಮುಖಿ.—ನನಗೆ ತಪ್ಪು ವರದಿ ಕಳಿಸಲು ಸಾಧ್ಯವಿಲ್ಲ. ಉದಾಹರಣೆ ತೋರಿಸಿ ಎಂದು ಹೇಳುತ್ತಿರುವುದು.

" A man keeps a dog and barks himself."

ಎಂಬುದನ್ನು ಜ್ಞಾಪಕಕ್ಕೆ ತರುತ್ತದೆ.

ಯೂನಿವರ್ಸಿಟಿ ಒಂದು ಆಟಾನಮಸ್ ಬಾಡಿ. ಅದರ ಆಡಳಿತಕ್ಕೆ ಪ್ರತ್ಯೇಕ ಕಾನೂನು ಇದೆ. ಅಲ್ಲಿನ ನ್ಯೂನತೆಗಳನ್ನು ಸರಿಪಡಿಸಲು ಕ್ರಮಗಳಿವೆ. ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ ವಿಷಯದಲ್ಲಿ ಸಿಂಡಿಕೇಟ್ ಏನೇನೋ ಮಾಡಿದ್ದಾರೆ. ಒಂದು ದೊಡ್ಡ ಸ್ಕ್ಯಾಂಡಲ್ ಮಾಡಿದ್ದಾರೆ ಎಂದು ಹೇಳುವುದು ಸರಿಯಲ್ಲವೆನ್ನಿಸುತ್ತದೆ. ಒಬ್ಬ ಮನುಷ್ಯ ನಾಯಿ ಇಟ್ಟುಕೊಂಡು ತಾನೇ ಬೊಗಳಿದಹಾಗಾಗುತ್ತದೆ.

Sri J. B. MALLARADHYA.—You keep that dog and you are barking.

Sri R. NAGAN GOWDA.—It is merely a figure of speech, you should not take it seriously.

Sri J. B. MALLARADHYA.—What about the Board of appointments? Have you gone in to the matter ? I stand upon that one point, upon the Board of Appointments. Is it regular ? Is it your report ? If that fails, I am prepared to retire from this House, this minute, on the Borad of Appointments issue.

Mr. SPEAKER.—Order, order I am prepared to resign ಎನ್ನುವುದು ಬೇಡ. ಇನ್ನು ಇರುವುದು ಸ್ವಲ್ಪ ಕಾಲ. ಯಾರೂ ರಿಸೈನ್ ಮಾಡುವುದು ಬೇಡಿ.

ಶ್ರೀ ಅಣ್ಣಾರಾವ್ ಗಣಮುಖಿ.— ಪ್ರತಿಯೊಂದು ಎಲ್ಲಾ ಇಕ್‌ಪರ್‌ಮೆಷನ್ ಬಂದಿದೆ ಯಾವುದೂ ಇರ್ರೆಗ್ಯುಲಾರಿಟೀಸ್ ಆಗಿಲ್ಲ ಎನ್ನಿಸುತ್ತದೆ. ವೈಸ್ ಚಾನ್ಸಲರ ಬಗ್ಗೆ ನಿಮಗೆ ವೈಯ್ಯಕ್ತಿಕ ದ್ವೇಷಾಸೂಯೆಗಳಿರಬಹುದು. ಆ ಬಗ್ಗೆ ನಾನು ಏನೂ ಹೇಳುವುದಿಲ್ಲ. ಅದಕ್ಕೆ ಸಂಬಂಧವೂ ಇಲ್ಲ. ವಿಶ್ವವಿದ್ಯಾನಿಲಯದ ಮಟ್ಟಿಗೆ ಹೇಳುವುದಾದರೆ ಅಲ್ಲಿಯ ಆಡಳಿತ ಏನೂ

(ಶ್ರೀ ಅಣ್ಣಾರಾವ್ ಗಣಮುಖಿ)

ಹದಗೆಟ್ಟಿಲ್ಲ. ಆಕ್ಟ್ ಪ್ರಕಾರವಾಗಿ ಎಲ್ಲಾ ಬಾಡಿಗಳು ಫಂಕ್ಷನ್ ಮಾಡುತ್ತೀವೆ. ಒಂದು ಬಾಡಿಯನ್ನು ಕ್ರಿಯೇಟ್ ಮಾಡಿನಂತರ ನಾವೇ ಅದರಲ್ಲಿ ಪ್ರವೇಶವಾಡಬಾರದು. ಮನೆಯಲ್ಲಿ ನಾಯಿನ್ನು ಕಟ್ಟಿ ಬೊಗಳಬಾರದು ಎಂದು ಹೇಳಿದಂತಾಗುವುದು. ಆ ವಿಚಾರದಲ್ಲಿ ನಾವು ಇಂಟರ್ ಫಿಯರ್ ಆಗತಕ್ಕದ್ದು ನನ್ನ ಕರ್ತವ್ಯವಲ್ಲ. ಇತ್ತೀಚೆಗೆ ಉಪಾಧ್ಯಾಯರು ಕೆಲವರು ಪಾಲಿಟೀಷಿಯನ್ ಕಡೆ ಹೋಗುತ್ತಿದ್ದಾರೆ. ನನಗೆ ಪ್ರಮೋಷನ್ ಸಿಕ್ಕಿಲ್ಲ ಅವನ್ನು ತೆಗೆದು ಇಲ್ಲಿ ಹಾಕಿ, ಇವನ್ನು ತೆಗೆದು ಅಲ್ಲಿ ಹಾಕಿ ಎನ್ನುವುದು, ಸಂಬಳ ಇತ್ಯಾದಿಗಳ ಬಗ್ಗೆ ದೊಡ್ಡ ಗಲಾಟೆ ಮಾಡುತ್ತಾ ರಾಜಕಾರಣಿಗಳ ಬೆನ್ನು ಹತ್ತಿದ್ದಾರೆ. ಆದರಿಂದ ಕೆಲವು ತೊಂದರೆಗಳೂ ಕೂಡ ಆಗಿವೆ. ಅದಕ್ಕಾಗಿಯೇ ನಾವೂ ಕೂಡ ಇದರ ಬಗ್ಗೆ ಏನು ಮಾಡಬೇಕೆಂದು ಪರಿಶೀಲನೆ ಮಾಡುತ್ತಿದ್ದೇವೆ. ರಿಸರ್ಚ್‌ಗೋಸ್ಕರ ಪ್ರತ್ಯೇಕವಾಗಿ ಹಣವನ್ನು ಒದಗಿಸಲಾಗಿದೆ. ರಿಸರ್ಚ್‌ಗೋಸ್ಕರ ಬಹಳ ಶ್ರಮ ಪಡುತ್ತಿದ್ದಾರೆ. ಈಗ ತುಮಕೂರು ಲಾ ಕಾಲೇಜು ವಿಷಯದಲ್ಲಿ ತಾವೇ ಹೇಳಿದಿರಿ. ಇಂಟರ್ ಫಿಯರ್ ಮಾಡಬೇಕೆಂದು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಇಂಟರ್‌ಫಿಯರ್ ಮಾಡುವ ಸಿಚುಯೇಷನ್ ಬಂದಿದೆ ಎಂದು ಹೇಳಿದೆ. That has nothing to do with this. I want you to go in to the matter in detail.

ಶ್ರೀ ಅಣ್ಣಾರಾವ್ ಗಣಮುಖಿ.—ನಾನು ಮೊದಲೇ ಹೇಳಿದ್ದೇನೆ. ಕಾನೂನಿನಲ್ಲಿರತಕ್ಕ ಸಣ್ಣ ಪುಟ್ಟ ಲೋಪ ದೋಷಗಳನ್ನು ದೊಡ್ಡದು ಮಾಡಿಕೊಂಡು ಎಲ್ಲಾ ಕಡೆಯೂ ಬೆಂಕಿ ಹತ್ತಿದೆಯೆಂದು ಕೂಗುವುದು ಸರಿಯಲ್ಲ. ಇದನ್ನು ನೋಡಿದರೆ ನನಗೆ ಒಂದು ಕಥೆಯು ಜ್ಞಾಪಕಕ್ಕೆ ಬರುತ್ತದೆ. ಯಾರೋ ಒಬ್ಬ ಬೆಂಕಿ, ಬೆಂಕಿ ಎಂದು ಕೂಗಿಕೊಂಡನಂತೆ, ಊರ ಜನರೆಲ್ಲರೂ ಓಡಿ ಬಂದರಂತೆ, ಬೆಂಕಿ ಎಲ್ಲಿ ಎಂದು ಕೇಳಿದಾಗ ನಮ್ಮ ಮನೆಯಲ್ಲಿ ಎಂದು ಹೇಳಿದನಂತೆ. ಮನೆಗೂ ಅವನನ್ನು ಕರೆದುಕೊಂಡು ಹೋಗಿ ಕೇಳಿದಾಗ ಒಲೆಯಲ್ಲಿ ಬೆಂಕಿ ಇದೆ ಎಂದನಂತೆ. ಈ ಪ್ರಕಾರವಾಗಿ ಸಣ್ಣ ಮಾತಿಗೆಲ್ಲಾ ದೊಡ್ಡದು ಮಾಡಿ ಯೂನಿವರ್ಸಿಟಿಗೆಲ್ಲಾ ಬೆಂಕಿ ಬಿದ್ದಿದೆ ಎಂದು ಹೇಳುವುದು ಸರಿಯಲ್ಲ. ಆ ರೀತಿ ಆಗಿಲ್ಲ ತಾವು ಏನೇನು ಮಾಡಬೇಕೆಂದು ಹೇಳಿದ್ದಿರೋ ಆ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

Sri C. K. RAJAIAH SHETTY.—Our Education Minister is really pandit.

Sri J. B. MALLARADHYA.—Board of appointments ತಪ್ಪು ಮಾಡಿದ್ದಾರೋ ಇಲ್ಲವೋ ಹೇಳಿ. I will abide by your decision.

ಶ್ರೀ ಅಣ್ಣಾರಾವ್ ಗಣಮುಖಿ.—ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ ವಿಷಯದಲ್ಲಿ ಏನೂ ತಪ್ಪು ಮಾಡಿಲ್ಲ. ಸೂಪರಿನ್‌ಟೆಂಡೆಂಟ್‌ರ ವಿಷಯದಲ್ಲಿ ಒಂದು ಕೇಸು ತೋರಿಸಿ ಅವರಿಗೆ ಹೆಚ್ಚಿನ ಸ್ಯಾಲರಿ ಕೊಟ್ಟಿದ್ದಾರೆಂದು ಹೇಳಿದರು. ನಾನು ಚಾಲೆಂಜ್ ತೆಗೆದುಕೊಳ್ಳುತ್ತೇನೆ. ಒಬ್ಬರಿಗೂ ಆ ರೀತಿ ಕೊಟ್ಟಿಲ್ಲವೆಂದು ನಾನು ಹೇಳುತ್ತೇನೆ.

ಫಿಜಿಕ್ಸ್ ಅನ್ನೇ ನಿರ್ದಿಷ್ಟವಾಗಿ ಹೇಳುವುದಕ್ಕೆ ಅಪಾಯಿಂಟ್ ಆಗಿಲ್ಲ. ಸಂಸ್ಕೃತವನ್ನು ಹೇಳುತ್ತಾರೆ, ಕೆಮಿಸ್ಟ್ರಿಯನ್ನು ಹೇಳುತ್ತಾರೆ. ಮೂರು ಸಬ್ಜೆಕ್ಟ್‌ನ್ನು ಒಬ್ಬರೇ ಹೇಳುತ್ತಾರೆ ಎಂದು ಹೇಳುವುದು ಅನ್ಯಾಯ. ಅದು ಸರಿಯಲ್ಲ. ವೈಸ್‌ಚಾನ್ಸಲರು ತಪ್ಪು ಮಾಡಿದ್ದಾರೆ ಎಂದು ಅಪಾದನೆ ಮಾಡುವುದು ಸರಿಯಲ್ಲ. ಒಂದು ವೇಳೆ ಬಾಡಿ ತಪ್ಪು ಮಾಡಿದರೆ ಅದು ಬಾಡಿಯ ತಪ್ಪೇ ಹೊರತು ವೈಸ್ ಛಾನ್ಸಲರ ತಪ್ಪು ಅಲ್ಲ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ವೈಸ್ ಛಾನ್ಸಲರು ತಪ್ಪುಮಾಡಿದ್ದಾರೆ ಎಂದು ನಾನು ತೋರಿಸಿಕೊಡುತ್ತೇನೆ.

ಶ್ರೀ ಅಣ್ಣಾರಾವ್ ಗಣಮುಖಿ.—ಯೂನಿವರ್ಸಿಟಿಯ ಆಕ್ಟಿನ ಸೆಕ್ಷನ್ (9) (5) ಓದಿ ನಿಮಗೆ ಗೊತ್ತಾಗುತ್ತದೆ.

Sri R. NAGAN GOWDA.—In the opinion of the Minister, how many of the poin's made by the Hon'ble Member from Nanjangud stand, Sir ?

ಅಧ್ಯಕ್ಷರು.—ಬೆಳಕು ಹರಿಯುವ ತನಕ ರಾಮಾಯಣ ಕೇಳಿ ಬೆಳಗಾದಮೇಲೆ ರಾಮನಿಗೆ ಸೀತೆಗೆ ಏನಾಗಬೇಕು ಎಂದು ಕೇಳಿದಹಾಗಾಯಿತು.

Sri J. B. MALLARADHYA.—You will see that they all stand Mr. Nagan Gowda.

Sri R. NAGAN GOWDA.—I thought he refuted all that.

ಶ್ರೀ ಅಣ್ಣಾರಾವ್ ಗಣಮುಖಿ.—If the first button of a man's Coat is wrongly butteı ed, then the whole thing becomes crude.

ಶ್ರೀಮಾನ್. ಆರುಮ್ಗಂ ಅವರು ಯೂನಿವರ್ಸಿಟಿ ವಿಷಯದಲ್ಲಿ ಅನೇಕ ಟೀಕೆಗಳನ್ನು ಮಾಡಿದ್ದಾರೆ ಕರ್ಣಾಟಕ ಯೂನಿವರ್ಸಿಟಿ ಬೇರೆ, ಮೈಸೂರು ಯೂನಿವರ್ಸಿಟಿ ಬೇರೆ ಏತಕ್ಕೆ ಎಲ್ಲಾ ಸೇರಿಸಿ ಒಂದೇ ಯೂನಿವರ್ಸಿಟಿ ಏತಕ್ಕೆ ಮಾಡಬಾರದು ಎಂದು ಹೇಳಿದರು. ಕರ್ಣಾಟಕ ಯೂನಿವರ್ಸಿಟಿಯ ವಿಚಾರದಲ್ಲಿಯೂ ಅನೇಕ ಟೀಕೆಗಳನ್ನು ಮಾಡಿದ್ದಾರೆ. ಈ ಸಂದರ್ಭದಲ್ಲಿ ನನಗೆ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಆರು ಜನ ಕುರುಡರು ಆನೆಯನ್ನು ನೋಡಿದಹಾಗೆ ಶ್ರೀಮಾನ್ ಆರುಮ್ಗಂ ಅವರು ಕರ್ಣಾಟಕ ವಿಶ್ವ ವಿದ್ಯಾನಿಲಯವನ್ನು ನೋಡಿದ್ದಾರೆ ಎಂದು ನನಗನ್ನಿಸುತ್ತದೆ. 6 ಮಂದಿ ಕುರುಡರು ಒಂದು ಆನೆಯನ್ನ ನೋಡಿದರಂತೆ, ಒಬ್ಬ ಆನೆಯ ಬಾಲವನ್ನು ಹಿಡಿದುಕೊಂಡ, ಒಬ್ಬ ಸೊಂಡಿಲು ಹಿಡಿದುಕೊಂಡ ಒಬ್ಬ ಹೊಟ್ಟೆಯನ್ನು ಹಿಡಿದುಕೊಂಡ, ಒಬ್ನ ಕೋರೆ ಹಲ್ಲನ್ನು ಹಿಡಿದ, ಒಬ್ಬ ಕಿವಿಯನ್ನು ಹಿಡಿದ, ಒಬ್ಬ ಕಾಲನ್ನು ಹಿಡಿದ ಹೀಗೆ ಪ್ರತಿಯೊಬ್ಬರೂ ಒಂದೊಂದು ಭಾಗವನ್ನು ಹಿಡಿದರು. ಹೊಟ್ಟೆಯನ್ನು ಹಿಡಿದವನು ಆನೆಯು ನಗಾರಿ ಇದ್ದಹಾಗೆ ಇದೆ ಎಂದು ಹೇಳಿದನಂತೆ, ಸೊಂಡಿಲು ಹಿಡಿದವನು ಕೊಂಬು ಇದ್ದ ಹಾಗೆ ಇದೆ ಎಂದು ಹೇಳಿದನಂತೆ ಕೊರೆ ಹಲ್ಲು ಹಿಡಿದವನು ಚೂರಿ ಇದ್ದ ಹಾಗೆ ಇದೆ ಎಂದು ಹೇಳಿದನಂತೆ, ಕಿವಿ ಹಿಡಿದವನು ಮರ ಇದ್ದಹಾಗೆ ಇದೆ ಎಂದು ಹೇಳಿದನಂತೆ.

ಅವರು ಅಲ್ಲಿ ಬರೀ ಲಿಂಗಾಯಿತರನ್ನು 80%ನಷ್ಟು ಸ್ಕೂಲನಲ್ಲಿ ಕಾಲೇಜಿನಲ್ಲಿ ತುಂಬಿಸಿದ್ದಾರೆ ಎಂದು ಹೇಳಿದರು. ಇದನ್ನು ಹೇಳುವುದಕ್ಕೆ ಮುನ್ನ ಅವರು ಯೂನಿವರ್ಸಿಟಿ ಪ್ರಾಸ್ಪೆಕ್ಟಸ್ ಸ್ವಲ್ಪ ನೋಡಿದ್ದರೆ ಅವರಿಗೇ ನಿಜಾಂಶ ಗೊತ್ತಾಗುತ್ತಿತ್ತು. ಅದನ್ನು ನೋಡಲಾರದೆ ಅವರು ಏನು ಬೇಕೋ ಅದನ್ನು ಹೇಳಿದ್ದಾರೆ ಅಷ್ಟೆ. ಆ ಪ್ರದೇಶದಲ್ಲಿ ಲಿಂಗಾಯಿತರ ಜನಸಂಖ್ಯೆ 30–35% ನಷ್ಟಿದ್ದರೂ, ಅಲ್ಲಿ ಯಾವ ಸ್ಕೂಲನ್ನು ನೋಡಲಿ 20 ಪರ್ಸೆಂಟಿಗಿಂತ ಹೆಚ್ಚಿಗೆ ಲಿಂಗಾಯಿತ ಉಪಾಧ್ಯಾಯರು ಇರುವಂತೆ ಕಾಣುವುದಿಲ್ಲ. ಹೀಗಿರುವಾಗ ಅವರು ಈ ರೀತಿಯ ಲೆಕ್ಕ ಎಲ್ಲಿ ಕಲಿತರೋ ಗೊತ್ತಿಲ್ಲ. ಯಾರೋ ಹೇಳಿದ್ದನ್ನು ಕಿವಿಯಿಂದ ಕೇಳಿ ಹೀಗೆ ಹೇಳಿರಬಹುದು. ಇದನ್ನು ನೋಡಿದರೆ ನನಗೊಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಬೆಂಗಳೂರಿನಿಂದ ಚನ್ನಪಟ್ಟಣಕ್ಕೆ ಯಾರೋ ಹೋಗುತ್ತಿದ್ದರಂತೆ. ಇವರಂಥವರು ದಾರಿಯಲ್ಲಿ ಒಬ್ಬರು ಸಿಕ್ಕಿದರು. ಯಾವ ಊರಿಗೆ ಹೋಗುತ್ತಿರೆಂದು ಪ್ರಶ್ನಿಸಿದರು. ಅವರು ಹಾದು—ಊರಿನಲ್ಲಿ ಏನು ವಿಶೇಷ ಎಂದು ಕೇಳಿದರು. ಅದಕ್ಕೆ ಇವರು, "ಅಲ್ಲಿ ನಡೆದ ಒಂದು ಅದ್ಭುತವನ್ನು ಕೇಳಲಿಲ್ಲವೇ"? ಎಂದು ಆಶ್ಚರ್ಯವನ್ನು ಸೂಚಿಸುತ್ತಾ "ಒಬ್ಬ ಮನುಷ್ಯ ಆ ಊರಿನಲ್ಲಿ ಮೂರು ಕಾಗೇ ಕಾರಿಕೊಂಡನಂತೆ" ಎಂದರು. "ಇದು ಅದ್ಭುತವೇ ಸರಿ" ಎಂದು ಮುಂದೆ ಅವರು ಹೋಗುತ್ತಿರುವಾಗ ಹನುಮಾನ್ ದೇವಸ್ಥಾನದ ಹತ್ತಿರ

(ಶ್ರೀ ಅಣ್ಣಾರಾವ್ ಗಣಮುಖಿ)

ಇನ್ನೊಬ್ಬರು ಸಿಕ್ಕಿದರು. "ಅದುಭುತ ಏನೋ ಚೆನ್ನಪಟ್ಟಣದಲ್ಲಿ ನಡೆಯುತ್ತಂತೆ; ಅದೇನಪ್ಪ" ಎಂದು ಅವರನ್ನು ಕೇಳಿದ. ಆತ ಹೇಳಿದ ; "ಕಾಗೆ ಕಾರಿಕೊಂಡದ್ದು ನಿಜ; ಆದರೆ ಮೂರಲ್ಲ ಎರಡು" ಎಂದು. ಕೊನೆಗೆ ಕುತೂಹಲದಿಂದ ಆತ ಚೆನ್ನಪಟ್ಟಣಕ್ಕೆ ಹೋದ. ಸ್ಟೇಷನ್ನಿನಲ್ಲಿ ಇಳಿದೊಡನೆಯೇ ಇನ್ನೊಬ್ಬನನ್ನು ಕೇಳಿದ. ಅವನು ಅವರ ಮನೆಯಲ್ಲಿ ಅವರಾಳ ಒಂದು ಕರಿಕಾಗೆಯನ್ನು ಕಾರಿಕೊಂಡರು ಎಂದು ಹೇಳಿದ. ಅವನ ಕುತೂಹಲ ಮತ್ತಷ್ಟು ಹೆಚ್ಚಿತು. ಏನೆಂಬುದನ್ನು ನೋಡಬೇಕೆಂದು ಅವರ ಮನೆಗೆ ಹೋದ. ಅಲ್ಲಿ ಏನಪ್ಪಾ ಎಂದು ಕೇಳಿದ್ದಕ್ಕೆ ಅವರು ಹೇಳಿದರು ತಮ್ಮ ಮಗಳು ನಾಲ್ಕು ಕರಿ ಮೆಣಸು ಕಾರಿಕೊಂಡಳು" ಎಂದು.

ಈ ಪ್ರಕಾರ ಆಯಿತು, ಆರ್ಮುಗಂರವರು ಸಂಗ್ರಹಿಸಿದ ಅಂಕಿ ಅಂಶಗಳ ಹಾಗೆ. ಅಲ್ಲಿ ಮೂರು ಡಿಪಾರ್ಟ್‌ಮೆಂಟ್‌ಗಳಲ್ಲಿ, ಎಲ್ಲಿ ಲಿಂಗಾಯಿತರ ಹುಡುಗರು ಹೆಚ್ಚಿದ್ದಾರೋ ಅದನ್ನೇ ತೆಗೆದುಕೊಂಡು ಹೇಳುವುದಾದರೂ, ಅಲ್ಲಿಯೂ ಲಿಂಗಾಯಿತ ಅಧ್ಯಾಪಕರ ಸಂಖ್ಯೆ ಶೇಕಡ 20 ಕ್ಕಿಂತ ಹೆಚ್ಚಿಲ್ಲ. The majority of the Heads of Departments and certain other posts are held by people of other Communities. Take the Karnatak College; more than 50 per cent are brahmins. If you go to that extent, there are others also. ಈ ಪ್ರಕಾರ ಹಿಂದಿನ ಸಲ ಅವರಿಗೆ ಒಂದು ರಿಪೋರ್ಟನ್ನು ಕೂಡ ಕೊಟ್ಟಿದ್ದೇನೆ. ಈ ಸಾರಿಯು ಪ್ರಾಸ್ಪೆಕ್ಟಸ್ ಬೇಕಾದರೆ ಅವರಿಗೆ ಕೊಡುತ್ತೇನೆ. ಅದನ್ನಾದರೂ ಓದಲಿ.

ಶ್ರೀ ಸಿ. ಎಂ. ಆರ್ಮುಗಂ.—ಓದುತ್ತೇನೆ.

ಶ್ರೀ ಅಣ್ಣಾರಾವ್ ಗಣಮುಖಿ.—ಓದುತ್ತೇನೆಂದು ಹೇಳಿದ್ದಾರೆ. He is a very nice man. ಅವರಿಗೇ ಅದರಿಂದ ಗೊತ್ತಾಗುತ್ತದೆ, ಅಲ್ಲಿ ಆಧಾರವೇನೂ ಇಲ್ಲ ಎಂಬುದು. ಎಲ್ಲಕ್ಕಿಂತಲೂ ಹೆಚ್ಚಾಗಿ ನಾನು ಲಿಂಗಾಯಿತರನ್ನು, ಡಿ.ಪಿ.ಐ.ಗಳೂ ಲಿಂಗಾಯಿತರು ಎಂದು ಹೇಳುತ್ತಾ ಅವರಿಗೆ ಜಾತಿಯತೆಯ ಭೂತವಿರುವಂತೆ ಕಾಣುತ್ತೆ. ಈಗ ಹೊಸ Constitution ನಮ್ಮ ದೇಶದಲ್ಲಿದೆ. ಇಂಥ ಸಂದರ್ಭದಲ್ಲಿ ಜಾತೀಯ ವಾದವನ್ನು ಅವರು ಎತ್ತಿರುವುದು ಸರಿಯಲ್ಲವೆಂದು ನಾನು ಹೇಳುತ್ತೇನೆ.

Sri C. M. ARUMUGHAM.—If it is a secular State, where is the need for you to appoint a Committee for Backward classes ? you declare the entire population as backward except a few persons !

Sri ANNARAO GANAMUKHI.—That is for those who are economically, socially, and educationally backward.

Sri C. M. ARUMUGHAM.—Why do you exclude one particular Community as advanced ?

Sri ANNARAO GANAMUKHI.—I am not yielding, Sir, on this point.

ಒಟ್ಟಿನಲ್ಲಿ ಅವರ information ಪಡೆದಿರುವುದು ಸರಿಯಾದದ್ದಲ್ಲವೆಂದು ನಾನು ಹೇಳಬಯಸುತ್ತೇನೆ.

ಆಮೇಲೆ ಇದರ ಸ್ಟ್ಯಾಚ್ಯೂಟ್‌ನಲ್ಲಿ ಕಾಂಗಾರಿ ಸಂಘಕ್ಕೆ ಪ್ರಾತಿನಿಧ್ಯ ಕೊಟ್ಟಿದ್ದರೆಂದು ಹೇಳಿದರು. ಜಸ್ಟೀಸ್ ಲೋಕೂರ್‌ರವರಂಥ ಪಂಡಿತರು ಮಾಡಿದ್ದನ್ನು ಇವರು ಹೀಗೇ ಹೇಳುವುದೇ ! ಅವರ ಯೋಗ್ಯತೆ ಏನು! ಎಂಥ first class ಅವರು ಮಾಡಿ ಕೊಟ್ಟಿದ್ದಾರೆ,

ಅಂಥವರನ್ನು criticise ಮಾಡುವುದು ಸರಿಯಲ್ಲ. Please understand that the Jurisdiction is limited only to seven districts. ಅಲ್ಲಿರುವ ಕಾಂಗಾರಿಗಳ ಸಂಖ್ಯೆಯನ್ನು ನೋಡಿ, ಅದನ್ನು Recognize ಮಾಡಿಕೊಟ್ಟಿದ್ದಾರೆ. 4,000 ಜನ ಕೂಲಿಗಾರರಿದ್ದಾರೆ ಅಲ್ಲಿ. ಅವರಿಗೆ ಕೊಡದೆ ನಿಮ್ಮ ಕೆ.ಜಿ.ಎಫ್.ಗೆ ಕೊಡಬೇಕಾಗಿತ್ತೇ ಏನು ! ಆದ್ದರಿಂದ ಆ ವಿಶ್ವವಿದ್ಯಾನಿಲಯವು ಪರಿಪೂರ್ಣವಾಗಿ ಪ್ರಾತಿನಿಧ್ಯ ಪಡೆದಿರತಕ್ಕ ಸಂಸ್ಥೆಯಾಗಿದೆ. ಹೀಗಿರುವಲ್ಲಿ ಅವರು ಹೀಗೆ ಮಾಡಿದ್ದಾರೆ, ಕೂಲಿಗಾರರನ್ನು ತೆಗೆದುಕೊಂಡಿದ್ದಾರೆ ಎಂದು ಟೀಕೆ ಮಾಡಿದ್ದು ಸರಿಯಲ್ಲ. ಆಗಿನ ವೈಸ್ ಚಾನ್ಸಲರು ಅದನ್ನು ಮಾಡಿದ್ದರೂ ಅವರು ಬಹಳ ನಿಪುಣರೆಂಬುದನ್ನು ತಾವು ನೆನಪಿಡಬೇಕು. 1948–49ರಲ್ಲಿ ಚುನಾವಣೆಯಿಂದ ಬಂದವರು ಅವರು ಅವರ ಸಮರ್ಥತೆಯ ವಿಷಯದಲ್ಲಿ ಯಾರೂ ಸಂಶಯ ಪಡಬೇಕಾದ್ದಿಲ್ಲ. ಈಗ ಪಾವಟೆಯವರು ಬಂದಿದ್ದಾರೆ. ಅವರನ್ನು ಯಾರ ಸಹಾಯದಿಂದಲಾದರೂ ಬಂದಿದ್ದಾರೆನ್ನಬಹುದೇ. He might have felt that the K.G.F. labour had been deprived of its membership to the Karnatak University.

(Sri KOTHAWALE *rose to interrupt many times*)

Sri C. M. ARUMUGHAM.—I can understand the Ministers anxiety in replying. I do not know why the Honorary Pleader General of the Congress Party should be so anxious !

Sri ANNARAO GANAMUKHI.—I have no pleaders. I am a pleader myself.

ಆದ್ದರಿಂದ ಶ್ರೀಮಾನ್ ಆರುಮುಗಂರವರು ಇನ್ನೂ ಚಿಕ್ಕವಯಸ್ಸಿನವರು. ಅವರು ಸ್ವಲ್ಪ enlightened criticism ಮಾಡಲೆಂದು ಸೂಚಿಸುತ್ತಾ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಂ. ಸಿ. ನರಸಿಂಹನ್.—ಶ್ರೀಮಾನ್ ಶ್ರೀನಿವಾಸ ಶೆಟ್ಟರ ತಿದ್ದುಪಡಿಯ ವಿಚಾರ ಹೇಳಲಲ್ಲವಲ್ಲ !

ಶ್ರೀ ಅಣ್ಣಾರಾವ್ ಗಣಮುಖಿ.—ಆ ತಿದ್ದುಪಡಿಯನ್ನು ನಾವೇ ತರಬೇಕಾಗಿತ್ತು. whole actನ್ನೇ ತಿದ್ದುಪಡಿ ಮಾಡಿ ತರಬೇಕೆಂದು ಹೇಳಿ ಸದ್ಯಕ್ಕೆ ಅದನ್ನು ಬಿಟ್ಟಿದ್ದೇವೆ.

Mr. SPEAKER.—I will now put the Demands to vote ;
The question is ;

"That the sums not exceeding the amounts shown in the list of Demands for Grants for the year 1961-62 circulated to the members be granted to Government to defray the charges which will come in course of payment during the financial year for the period ending 31st day of March 1962 in respect of Demands No. 5, 7-A and 20."

The motion was adopted.

(Mr. SPEAKER)

As directed by the Speaker the Motion for demand for grants which were adjusted by this House are reproduced below :—

Demand No. 5 Forest.

10. Forest.

"That a sum not exceeding Rs. 3,19,71,000 be granted to the Government to defray the charges which will come in course of payment during the financial year for the period ending 31st day of March 1962, in respect of 'Forest'."

Demand 7-A-Sales Tax–Administration

12-A Sales Tax.

"That a sum not exceeding Rs. 32,35,000 be granted to the Government to defray the charges which will come in course of payment during the financial year for the period ending 31st day of March 1962, in respect of 'Sales Tax'."

Demand No. 20–Education.

37 Education

"That a sum not exceeding Rs. 16,45,63,700 be granted to the Government to defray the charges which will come in course of payment during the financial year for the period ending 31st day of March 1962, in respect of 'Education'."

Mr. SPEAKER.—The House will now rise and meet tomorrow at 8-30 A.M. There will be no question hour.

The House adjourned at Fifty Minutes past Six of the Clock to meet again at Thirty Minutes fast Eight of the Clock on Saturday the 8th April 1961.

WD 6419—GPB—(L.A. New Br.)—500—20-1-67.